

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTIBASAVANTAPPAHOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 292 | Wednesday 31-07-2024 | E-mail : maruti.b.hosamani76@gmail.com | Page: 4 | Price : Rs. 1/-


## ಜಗದ ಮನುಕುಲದ ಸ್ನೇಹ ಅಜರಾಮರ




ಜಗದ ಮನುಕುಲದ ಸ್ನೇಹ ಅಜರಾಮರ
ಎಲ್ಲೋ ಜನನ ಎಲ್ಲೋ ಪಯಣ
ಸಹಜೀವನ ಸ್ನೇಹ ಗುಣ
ಬದುಕಿನ ಬೆಳಕು
ಸ್ನೇಹದ ಹಸ್ತ ಸೌಹಾರ್ದಯುತ
ಬಾಳಿಗೆ ಬೇಕು ಸುಗುಣ ಸ್ನೇಹ
ಬಡತನ ಸಿರಿತನ
ಸುಖ ದುಃಖ
ಉತ್ತಮ ಮಧ್ಯಮ
ಶ್ರೇಷ್ಠ ಕನಿಷ್ಠ
ನೋವು ನಲಿವು
ನಗು ಅಳು
ಯಾವುದೇ ಸಂದರ್ಭದಲ್ಲೂ
ನಿಸ್ವಾರ್ಥವಾಗಿ ಪಾಲ್ಗೊಳ್ಳುವ
ಮನಸ್ಸೆಂದರೆ ಸ್ನೇಹ
ಭಾವ ಸುಂದರ

ಸ್ವಚ್ಛ ಗೆಳತನದ ಒಲವು
ನಿಸ್ವಾರ್ಥಸ್ನೇಹ ಜಗದ ಸಿರಿ
ವಜ್ರ ಮುಷ್ಠಿ ಸದಾ ಸಿದ್ಧ
ಗೆಳತನ ಅಜರಾಮರ.

–ದೇಶಂಸು.
(ಶ್ರೀಎಸ್.ಎಸ್.ಅಂಗಡಿ)
**ಆರೋಗ್ಯ ನಿರೀಕ್ಷಣಾಧಿಕಾರಿ "ವಿಶ್ವಆರೋಗ್ಯಸಂಜೀವಿನಿ" ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು, ಬಾಗಲಕೋಟ**

# ವ್ಯಾಪಕ ಭ್ರಷ್ಟಾಚಾರ ಮಾಡಲು ಹೊರಟಿರುವ ಶಾಸಕ ಬಲ್ಲಾವುಣಸಿ ರಾಮಣ್ಣ

**ಕೊಟ್ಟೂರು :** ಮಲ್ಲಿಕಾರ್ಜುನ ಖರ್ಗೆ ರೈಲ್ವೆ ಸಚಿವರಾಗಿದ್ದ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ 2013 ರಲ್ಲಿ ರಚನೆಯಾಗಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಇವರ ನೇತೃತ್ವದಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಯ ಅಭಿವೃದ್ಧಿಗಾಗಿ ವಿವಿಧ ಉದ್ದೇಶಗಳ ವಿಷಯ ತಜ್ಞರು, ಜಿಲ್ಲಾ ಉಸ್ತುವಾರಿ ಸಚಿವರು ಶಾಸಕರು, ಸ್ಥಳೀಯ ಸಂಸ್ಥೆ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಜಿಲ್ಲಾಧಿಕಾರಿಗಳು, ಜಿಲ್ಲಾ ಸಿ.ಇ.ಓ ಒಳ ಗೊಂಡು ಅನುಷ್ಟಾನ ಸಮಿತಿ ಒಳ ಗೊಂಡಿರುತ್ತದೆ.

ಹಗರಿಬೊಮ್ಮನಹಳ್ಳಿ ಕ್ಷೇತ್ರದ ಶಾಸಕರು ಕೆ.ಕೆ.ಆರ್.ಡಿ.ಬಿ ಯೋಜನೆಯ ಹಣ ಮೊದಲ ಆದ್ಯತೆಯಾಗಿ ವಿಧಾನ ಸಭಾ ಕ್ಷೇತ್ರದಲ್ಲಿನ ಶಿಕ್ಷಣ ಅಭಿವೃದ್ಧಿಗೆ ಬಳಸ ಬೇಕಿತ್ತು ಆದರೆ ಶಾಸಕರು ಆ ಹಣವನ್ನು ತಮ್ಮ ಮನೆಯ ಮುಂದಿನ ಸಿ.ಸಿ. ರಸ್ತೆ ಅಭಿವೃದ್ಧಿಗೆ ಬಳಸಿ ಕೊಳ್ಳುತ್ತಿದ್ದಾರೆ, ಅದು ಯಾವುದೇ ಸರ್ಕಾರದ ಸಂಸ್ಥೆಗಳಿಗೆ ಗುತ್ತಿಗೆ ನೀಡದೇ ಅನಧಿಕೃತ ಹೆವಿಡೆಂಟ್ ಸಂಸ್ಥೆಗೆ ಗುತ್ತಿಗೆ ನೀಡಿ ಆ ಸಂಸ್ಥೆ ಮೂಲಕ ರಸ್ತೆ ಕಾಮಗಾರಿ ಮಾಡಿ ಕೊಳ್ಳುತ್ತಿದ್ದಾರೆ ಎಂದು ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಶಾಸಕರ ವಿರುದ್ಧ ಬಲ್ಲಾವುಣಿಸಿ ರಾಮಣ್ಣ



ನೇರವಾಗಿ ಆರೋಪ ಮಾಡಿದರು.

ನಮ್ಮ ಕ್ಷೇತ್ರದ ಶಾಸಕರು ಕೇವಲ ಪ್ರಚಾರ ಪ್ರಿಯರು, ನಮ್ಮ ಕ್ಷೇತ್ರದಲ್ಲಿ ಸುಮಾರು 15 ಏತ ನೀರಾವರಿಗಳು ಇದ್ದು ಅವುಗಳು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುತ್ತವೆ. ಇದರಲ್ಲಿ ಸುಮಾರು 65 ಜನ ಗುತ್ತಿಗೆ ನೌಕರರಿದ್ದು ಇವರಿಗೆ 2 ವರ್ಷಗಳಿಂದ ವೇತನವಾಗಿಲ್ಲ, ಜೊತೆಗೆ ಗುತ್ತಿಗೆ ಕರಾರು ನವೀಕರಣ ಗೊಂಡಿಲ್ಲ, ಆ ಕೆಲಸಗಳ ಕಡೆಗೆ ಗಮನ ಹರಿಸದೇ ಕೇವಲ ಪ್ರಚಾರಕ್ಕಾಗಿ 40 ವರ್ಷಗಳ ಇತಿಹಾಸ ಇರುವ ಏತ ನೀರಾವರಿಗಳಿಗೆ ಚಾಲನೆ ನೀಡುತ್ತಾ ಬಂದಿದ್ದಾರೆ. ಎಂದು ಪರಾಜಿತ ಬಿಜೆಪಿ ಅಭ್ಯರ್ಥಿ ಬಲ್ಲಾವುಣಸಿ ರಾಮಣ್ಣ ಹೇಳಿದರು. ಕೆ.ಕೆ.ಆರ್.ಡಿ.ಬಿ ಯೋಜನೆ ಮೊದಲ ಆದ್ಯತೆಯಾಗಿ ಶಾಲಾ ಕೊಠಡಿ, ಶಾಲಾ ಕಾಂಪೌಂಡ್, ಶಾಲಾ ಅಭಿವೃದ್ಧಿಗಳಿಗೆ ಮೊದಲ ಆದ್ಯತೆಗೆ ನೀಡಬೇಕಾದ ಹಣವನ್ನು ಅವರು ರಸ್ತೆ ಕಾಮಗಾರಿಗಳಿಗೆ ಬಳಸಿ ಕೊಂಡಿದ್ದು ಎಷ್ಟು ಸರಿ ಎಂದು ಶಾಸಕರನ್ನು ಪ್ರಶ್ನಿಸಿದರು. ನಂತರ ಮೈತ್ರಿ ಕುರಿತು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಉತ್ತಮವಾಗಿದೆ. ಸ್ಥಳೀಯ ಮಟ್ಟದಲ್ಲಿ ಸ್ವಲ್ಪ ಸಮಸ್ಯೆ ಗೊಂದಲ ಇರುವುದು ನಿಜ ಎಂದು ತಾವೇ ಒಪ್ಪಿಕೊಂಡರು. ಕೆ.ಕೆ.ಆರ್.ಡಿ.ಬಿ ಯೋಜನೆ ಹಣ ಶಿಕ್ಷಣಕ್ಕೆ ಬಳಕೆಯಾಗಲಿ ಎಂಬುದು ಅಷ್ಟೆ ನನ್ನ ಉದ್ದೇಶ, ಕೆ.ಕೆ.ಆರ್.ಡಿ.ಬಿ ಹಣದಿಂದ ಸಿಸಿ ರಸ್ತೆಗಳು ಮಾಡಿಸುತ್ತಿರುವುದಕ್ಕೆ ನನ್ನ ಆರೋಪವಿದೆ ಎಂದು ಬಲ್ಲಾವುಣಸಿ ರಾಮಣ್ಣ ಹೇಳಿದರು. ಈ ಸಂದರ್ಭದಲ್ಲಿ ಜೋಗಿ ಹನುಮಂತಪ್ಪ ಪುರಸಭೆ ಸದಸ್ಯರು ಹನುಮಂತಪ್ಪ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್ ಕುಮಾರ್ ಸಿ ಕೊಟ್ಟೂರು.**

## ಗಾಳಿ ಮರಗಮ್ಮನಿಗೆ ಪೂಜೆ ಮಾಡಿ ಸೀಮೆಯಿಂದ ಬೇರೆ ಸೀಮೆ ಬಿಟ್ಟು ಬರುವ ಕಾರ್ಯಕ್ರಮ ಸಂಪನ್ನ



**ಕಲಕೇರಿ :** ತಾಳಿಕೋಟೆ ತಾಲೂಕಿನ ಕಲಕೇರಿ ಗ್ರಾಮಸ್ಥರು ಎಲ್ಲಾ ರೈತ ಬಾಂಧವರು ಕೂಡಿ ಕೊಂಡು ಜೋಡು ಗುಡಿಯಿಂದ ಡೊಳ್ಳು ಕುಣಿತ ಮೆರವಣಿಗೆ ಮಾಡುತ್ತಾ ಗಾಳಿ ಮರಗಮ್ಮನಿಗೆ ಪೂಜೆಯನ್ನು ಮಾಡಿ ಕಲಕೇರಿ ಸೀಮೆಯಿಂದ ಬೇರೆ ಸೀಮೆಯಲ್ಲಿ ಬಿಟ್ಟು ಅಲ್ಲಿ ಪೂಜೆಯನ್ನು ಮಾಡಿ ಕಲಕೇರಿ ಗ್ರಾಮದ ಎಲ್ಲಾ ರೈತ ಬಾಂಧವರ ಇದ್ದು. ಒಂದು ತಲಾ ತಲಾಂತರ ದಿಂದ ಬಂದಂತ ಪದ್ಧತಿ ಹಿರಿಯರು ಮಾಡಿದಂತ ನಿಯಮಗಳು ಮಳೆ ಬರುತ್ತೆ ಎಂಬ ನಂಬಿಕೆಯಿಂದ ನಾವು ಎಲ್ಲಾ ರೈತರು ಕೂಡಿ ಗಾಳಿ ಮರಗಮ್ಮನನ್ನು ಕಲಕೇರಿ ಸೀಮೆಯಿಂದ ಬೇರೆ ಸೀಮೆಗೆ ಒಯ್ದು ಬಿಟ್ಟು ಬರುವ ಒಂದು ಪದ್ಧತಿ ರೈತರು ಮಳೆ ಬರುತ್ತದೆ. ಎನ್ನುವುದು ಒಂದು ನಂಬಿಕೆ ಮತ್ತು ಒಂದು ಭರವಸೆ ಕಲಕೇರಿ ಗ್ರಾಮದ ಎಲ್ಲಾ ರೈತರು ಹಿರಿಯರು ಪಾಲ್ಗೊಂಡು ಅದ್ದೂರಿಂದ ಮೆರವಣಿಗೆ ಮಾಡುತ್ತಾ ಕಲಕೇರಿ ಸೀಮೆಯಿಂದ ಬೇರೆ ಸೀಮೆಗೆ ಗಾಳಿ ಮರ್ಗಮ್ಮನನ್ನು ಬಿಟ್ಟು ಬರುವುದು ಹಿರಿಯರು ಮಾಡಿದ ಪದ್ಧತಿಯನ್ನು ಎಲ್ಲಾ ರೈತ ಬಾಂಧವರು ಮಾಡಿದ್ದಾರೆ.

ಈ ಸಂದರ್ಭದಲ್ಲಿ ಊರಿನ ಗ್ರಾಮಸ್ಥರು.ವಾಗೀಶ್. ಹಿರೇಮಠ್. ಮಡಿವಾಳಯ್ಯ ಲಕ್ಕುಂಡಿ ಮಠ. ವಿಶ್ವನಾಥ್ ಬಡಿಗೇರ್. ಮಲ್ಲು ಎಸ್ ಜಂಬಗಿ.ಕಲ್ಲಪ್ಪಜಂಬಗಿ.ಬಸಲಿಂಗಯ್ಯಬೆಕಿನಾಳ.ಹಣಮಂತ್‌ಸುಂಕದ್. ತುಕಾರಾಂ ರಾಠೋಡ. ಇನ್ನೂ ಹಲವಾರು ರೈತರು ಪಾಲ್ಗೊಂಡು ಈ ಗ್ರಾಮದಲ್ಲಿ ಗಾಳಿಯ ಮರಗಮ್ಮನನ್ನು ಕಲಕೇರಿ ಸೀಮೆಯಿಂದ ಬೇರೆ ಸೀಮೆಗೆ ಬಿಟ್ಟು ಬರುವ ಕಾರ್ಯಕ್ರಮ ಮಾಡಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ ತಾಳಿಕೋಟೆ**

# ಸಾಮಾಜಿಕ ಕಳಕಳಿಯ ಪ್ರತೀಕ–ಡಾ. ದೊಡ್ಡಮನಿ ಲೋಕರಾಜ

**ಬಣವಿಕಲ್ಲು :** ಕರ್ನಾಟಕದ ಅಲೆಮಾರಿ ಸಿಂಧೋಳು ಬುಡಕಟ್ಟು ಸಮುದಾಯದ ಮೇಲೆ ಮೊಟ್ಟ ಮೊದಲನೇ ಬಾರಿಗೆ ಸಂಶೋಧನೆ ಮಾಡಿದವರು ಡಾ. ದೊಡ್ಡಮನಿ ಲೋಕರಾಜ ಅವರು. ಇವರ ಸಂಶೋಧನಾ ಅಧ್ಯಯನ ದಿಂದ ಸಿಂಧೋಳ ಸಮುದಾಯ ಮೂಲಭೂತ ಸೌಲಭ್ಯಗಳನ್ನು ಪಡೆದು ಕೊಳ್ಳುವಲ್ಲಿ ಇವರ ಪಾತ್ರ ದೊಡ್ಡದು. ಎಲೆ ಮರೆಯ ಕಾಯಿಯಂತೆ ಯಾವುದೇ ಪ್ರಚಾರವಿಲ್ಲದೆ ಬಸವಣ್ಣನವರ 'ಕಾಯಕವೇ ಕೈಲಾಸ' ದಂತೆ ಡಾ, ಡಿ. ಲೋಕರಾಜ ಅವರ ಸಂಶೋಧನೆ, ಅಧ್ಯಾಪನ, ಸಾಹಿತ್ಯ ಹಾಗೂ ಸಾಮಾಜಿಕ ಸೇವೆಯಲ್ಲಿ ಸದಾ ತೊಡಗಿಸಿ ಕೊಂಡಿರುತ್ತಾರೆ . ಡಾ, ಡಿ. ಲೋಕರಾಜ ಅವರು ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಬಣವಿಕಲ್ಲು ಗ್ರಾಮದವರು. ತಂದೆ ದಿವಂಗತ ಜೆ.ಲಿಂಗಪ್ಪ, ತಾಯಿ ಬಿ. ಬಸಮ್ಮ. ತಂದೆ ಸರ್ಕಾರಿ ಪ್ರೌಢಶಾಲೆ ಗುಡೆಕೋಟೆಯಲ್ಲಿ ಜವಾನರ ವೃತ್ತಿಯಲ್ಲಿ ಇರುವಾಗ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪೂರೈಸಿದರು. ಜವಾನರ ಮಗ ಉನ್ನತ ಶಿಕ್ಷಣ ಮತ್ತು ಹುದ್ದೆಯಲ್ಲಿ ಇರ ಬೇಕೆಂಬುವುದು ತಂದೆಯ ಮಹದಾಸೆ ಆಗಿದ್ದು, ತಂದೆ ಆಸೆಯಂತೆ ಡಾ. ಡಿ. ಲೋಕರಾಜ ಅವರು ಪದವಿ ಪೂರ್ವ ಶಿಕ್ಷಣ ಚಿಕ್ಕ ಜೋಗಿಹಳ್ಳಿಯಲ್ಲಿ, ಎಸ್.ಎ.ವಿ.ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೂಡ್ಲಿಗಿ ಪದವಿ ಶಿಕ್ಷಣ, ಗುಲ್ಬರ್ಗ ವಿಶ್ವ ವಿದ್ಯಾಲಯ, ಗುಲ್ಬರ್ಗಾ, ಸಮಾಜಶಾಸ್ತ್ರ ಸ್ನಾತಕೋತ್ತರ ಪದವಿ 2001 ರಲ್ಲಿ ಪಡೆದು ಕೊಂಡರು. ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರಾದ ಡಾ. ಕೆ ಎಂ ಮೇತ್ರಿ ಅವರ ಮಾರ್ಗದರ್ಶನದಲ್ಲಿ ಬಳ್ಳಾರಿ ಜಿಲ್ಲೆಯ ದುರುಗ ಮುರುಗಿಯರು ಸಮಾಜ ಶಾಸ್ತ್ರೀಯ ಅಧ್ಯಯನ ಎಂಬ ವಿಷಯದಲ್ಲಿ ಎಂ.ಫಿಲ್ ಪದವಿ 2002 ರಲ್ಲಿ ಮತ್ತು ಡಾ. ಕೆ ಎಂ ಮೇತ್ರಿ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ಸಿಂಧೋಳು ಸಮುದಾಯದ ಸಮಾಜ ಶಾಸ್ತ್ರೀಯ ಅಧ್ಯಯನ ಎಂಬ ವಿಷಯದಲ್ಲಿ 'ಡಾಕ್ಟರ್ ಆಫ್ ಫಿಲಾಸಫಿ' "ಪಿ.ಎಚ್.ಡಿ" ಪದವಿಯನ್ನು 2006 ರಲ್ಲಿ ಪಡೆದು ಕೊಂಡರು. ಅಂದು ಇವರ ತಂದೆ ಕಡಿಮೆ ಸಂಬಳದಲ್ಲಿ ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟ ಕರವಾಗಿತ್ತು. ಅಂತಹ ಸಂದರ್ಭದಲ್ಲಿ ಗುಡೆಕೋಟೆ ಸರ್ಕಾರಿ ಪ್ರೌಢ ಶಾಲೆಯ ಆವರಣದೊಳಗೆ ಗುಡಿಸಲು ಮನೆ ನಿರ್ಮಿಸಿ ಕೊಂಡಿದ್ದರು. ಈ ಹೈಸ್ಕೂಲಿನಲ್ಲಿ ಹಲವು ವರ್ಷಗಳ ಸೇವೆ ಪೂರೈಸಿ ಕೊಂಡು, ಚಿಕ್ಕ ಜೋಗಿಹಳ್ಳಿಗೆ ವರ್ಗಾವಣೆ ಯಾದರು. ತಮ್ಮ ಸ್ವಂತ ಊರು



ಬಣವಿಕಲ್ಲು ಗ್ರಾಮದಲ್ಲಿ ಖಾಯಂ ವಾಸ ಮಾಡಿದರು. ಕಷ್ಟದ ಪರಿಸ್ಥಿತಿಯಲ್ಲಿ ಡಾ. ಡಿ ಲೋಕರಾಜ ಅವರು ಕೃಷಿ ಕೂಲಿ ಕೆಲಸ , ಕಟ್ಟಡ ಕೂಲಿ ಕೆಲಸ. ಇತರೆ ವೃತ್ತಿಗಳು ಮತ್ತು ಕೆಲವು ದಿನಗಳವರೆಗೆ ಬೆಂಗಳೂರಿಗೆ ದುಡಿಯುವುದಕ್ಕಾಗಿ ಹೋಗಿದ್ದರು. ಹೀಗೆ ಕೆಲಸಗಳನ್ನು ಮಾಡುತ್ತಾ ತಂದೆ – ತಾಯಿ ಅವರಿಗೆ ತಕ್ಕ ಮಗನಾಗಿದ್ದರು.

**ಸಂಶೋಧನಾ ಅಧ್ಯಯನ ಹಿನ್ನೆಲೆ–**

ಕರ್ನಾಟಕದಲ್ಲಿ ಅಲೆಮಾರಿ ಸಿಂಧೋಳ್ಳು ಸಮುದಾಯದ ಪೋತರಾಜ ಇಲ್ಲವೇ ಪೂಜಾರಿ / ಆತನ ಹೆಂಡತಿ ದೇವರ ಪೆಟ್ಟಿಗೆ / ದೇವರ ಬುಟ್ಟಿ ಹೊತ್ತು ಕೊಂಡು ಭಿಕ್ಷಾಟನೆಯನ್ನು ಮಾಡುವುದು. ಜನರ ಮಧ್ಯೆ ಅಲಲಲ....ಹಾ..... ದುರಗಮ್ಮ.... ಎಂದು ಚಾವಟಿನಿಂದ ಚಟ್... ಪಟಪಟನೆ ಮೈಗೆ ಹೊಡೆದು ಕೊಳ್ಳುತ್ತಾ, ಉರುಮಿ ವಾದ್ಯ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕೈಲಿ ಹಿಡಿದ ಚಾವಟಿಯನ್ನು ಎತ್ತಿ ತಿರುಗಿಸುತ್ತಾ , ಕೆಲವೊಮ್ಮೆ ಆ ಚಾವಟಿ ಎರಡು ಕೈಯಿಂದ ಹಿಡಿದು ಸಂದರ್ಭನು ಸಾರವಾಗಿ ನೃತ್ಯ ಮಾಡುವನು. ದೇವಿಯ ಗುಣಗಾನ ಮಾಡುವರು. ಹೀಗೆ ಪೋತರಾಜನು ಕೈಯಲ್ಲಿ ಹಿಡಿದ ತನ್ನ ಮೈಯಿಗೆ ಚಾವಟಿಯಿಂದ ಹೊಡೆದು ಕೊಳ್ಳುತ್ತಾ, ಮುಂಗೈಯಲ್ಲಿ ಚಾಕುವಿನಿಂದ ರಕ್ತ ಸುರಿಸಿ ಕೊಳ್ಳುವನು. ಆತನ ಹೆಂಡತಿ ಉರುಮಿ ವಾದ್ಯ ಜಿರ್, ಬುರ..... ಶಬ್ದದೊಂದಿಗೆ ಬಾಲಬೇಲು..... ಎಂದು ರಾಗವಾಗಿ ಹಾಡುತ್ತಾಳೆ. ಅಲ್ಲಿನ ಜನರಿಂದ ಭಿಕ್ಷೆ ಪಡೆದು ಕೊಳ್ಳುವರು. ಈ ಹಿಂದೆ ಸ್ಥಳೀಯರು ಸಿಂಧೋಳ ಸಮುದಾಯವನ್ನು ದುರುಗ ಮುರುಗಿಯರು, ಬುರ್ಬುರ್ ಪೋಚಮ್ಮ, ಸುಂಕಲಮ್ಮನ ಆಡಿಸುವವರು. ಕೂಗಮ್ಮನ ಆಡಿಸುವವರು, ದುರ್ಗಮ್ಮನ ಆಡಿಸುವವರು, ಊರು ಮಾರಿಯರು, ಬರ್ಮಾರಿಯರು, ಬೆಂಕಿ ಮಾರಿಯರು, ಪೂಜಾರಿ, ಪೋತರಾಜ ಹಾಗೂ ಇತ್ಯಾದಿ ಹೆಸರುಗಳಿಂದ ಕರೆಯಲಾಗಿತ್ತು. ಈ ಪದಗಳು ದೈವರಾದನೆ ಮತ್ತು ವೃತ್ತಿ ಸೂಚಕ ಪದಗಳಾಗಿವೆ. "ಪಿ.ಎಚ್.ಡಿ" ಸಂಶೋಧನಾ ಅಧ್ಯಯನದಲ್ಲಿ ಸಂಶೋಧಕ ಡಾ. ದೊಡ್ಡಮನಿ ಲೋಕರಾಜ ಮತ್ತು ಡಾ. ಕೆ.ಎಂ. ಮೇತ್ರಿ ಅವರು ಮಾರ್ಗ ದರ್ಶನದಂತೆ ಸಿಂಧೋಳ್ಳು ಸಮುದಾಯದ ಕುರಿತು ಕೆಲವೊಂದು ಅಂಶಗಳನ್ನು ಕಂಡು ಹಿಡಿದರು. ಸಿಂಧೋಳ್ಳು ಸಮುದಾಯ ಮೂಲತಃವಾಗಿ ಆಂಧ್ರ ಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ಒಂದು ಕಾಲದಲ್ಲಿ ತೆಲಂಗಾಣ ಮತ್ತು ಆಂಧ್ರಪ್ರದೇಶದ ಗಡಿ ಭಾಗಗಳ ಮೂಲಕ ಭಿಕ್ಷಾಟನೆ ಮಾಡುತ್ತಾ ಕರ್ನಾಟಕದಲ್ಲಿ ಖಾಯಂ ವಾಸ ಮಾಡ ತೊಡಗಿದರು. ಇವರ ಮಾತೃಭಾಷೆ ತೆಲುಗು ಆಗಿರುವುದರಿಂದ ಹೆಚ್ಚಾಗಿ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ಈ ಸಮುದಾಯವನ್ನು "ಸಿಂದೊಳ್ಳರು" ಅಂತಲೂ ಕರೆಯಲಾಗುತ್ತದೆ. ಇವರ ಆಚರಣೆ ಪದ್ಧತಿಗಳು ಕರ್ನಾಟಕದಲ್ಲಿರುವ ಅಲೆಮಾರಿ ಸಿಂಧೋಳ್ಳು ಸಮುದಾಯದಲ್ಲಿ ಒಂದೇ ರೀತಿಯಲ್ಲಿ ಕಂಡು ಬಂದಿರುವುದರಿಂದ ಕರ್ನಾಟಕದಲ್ಲಿ "ಅಲೆಮಾರಿ ಸಿಂಧೋಳ್ಳು ಸಮುದಾಯ" ಎಂದು ಗುರುತಿಸ ಲಾಯಿತು. ಮುಂದೆ ಸಂಶೋಧನಾ ಅಧ್ಯಯನ ಬೆಳಕಿಗೆ ಬಂದಿತ್ತು. ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಸಿಂದೊಳ್ಳು ಸಮುದಾಯವು ಪರಿಶಿಷ್ಟ ಜಾತಿಯ ಮೀಸಲಾತಿಯ ಪಟ್ಟಿಯಲ್ಲಿದೆ. ಸಂಶೋಧನಾ ಅಧ್ಯಯನ ದಿಂದ 2006 ರಲ್ಲಿ ಬಳ್ಳಾರಿ ನಗರದ ಗುಡಾರ ನಗರದಲ್ಲಿ ಅಲೆಮಾರಿ ಸಿಂಧೋಳ್ಳು ಸಮುದಾಯ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದು ಕೊಂಡು. ನಂತರ ಹಲವು ಜಿಲ್ಲೆಗಳಲ್ಲಿ ಪಡೆದು ಕೊಂಡಿದ್ದಾರೆ.

**ಪ್ರಕಟಿತ ಕೃತಿಗಳು ಮತ್ತು ಇತರೆ–**

ಡಾ. ಡಿ. ಲೋಕರಾಜ ಅವರು ರಚಿಸಿರುವ ಕೃತಿಗಳಲ್ಲಿ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯ "ಸಿಂಧೋಳು" ಎಂಬ



ಕೃತಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಪ್ರಕಟಿಸಿದೆ, ಸಿಂಧೋಳು ಸಮುದಾಯ ಸಮಾಜ ಶಾಸ್ತ್ರೀಯ ಅಧ್ಯಯನ (ಅ ಪ್ರಕಟಿತ ಪಿ.ಎಚ್.ಡಿ ಮಹಾ ಪ್ರಬಂಧ) ಬಣವಿಕಲ್ಲು ಮರಿಯಪ್ಪ ಜೀವನ ಕಥನ (ಲೇಖ–ಕರ ಅಜ್ಜನವರ ಕುರಿತು) ಜಗಳೂರು ಸಿರಿ ವಾರ್ಷಿಕ ಸಂಚಿಕೆ (ಸಂಪಾದಕತ್ವ) ಟೆಂಟು ಹಾಡಿತು ಲಾಲಿ ಹಾಡು ಎಂಬ ಕವನ ಸಂಕಲನ. ರಚಿಸಿದ್ದಾರೆ. ದಲಿತ ಹಾಗೂ ಅಲೆಮಾರಿ ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿದಂತೆ 40 ಕ್ಕೂ ಹೆಚ್ಚು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಲೇಖನಗಳು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಣೆ ಗೊಂಡಿವೆ. 2017 ಮತ್ತು 18 ನೇ. ಸಾಲಿನ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ವತಿಯಿಂದ "ಕರ್ನಾಟಕ ತೊಗಲು ಗೊಂಬೆಗಳ ರಚನೆ ಮತ್ತು ಗೊಂಬೆಗಳ ವೈವಿಧ್ಯತೆ" ಕುರಿತು ಸಂಶೋಧನಾ ಫೆಲೋಶಿಪ್ ಮಾಡಿರುವರು. ಬಿಡುವಿನ ವೇಳೆಯಲ್ಲಿ ಕವಿ ಗೋಷ್ಠಿಯಲ್ಲಿ ಭಾಗವಹಿಸುವರು. ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಅಭಿವೃದ್ಧಿ ಅಧ್ಯಯನ ವಿಭಾಗ ಇವರ ಬಾಹ್ಯ ಪಿ.ಎಚ್.ಡಿ ಮಾರ್ಗ ದರ್ಶನದಲ್ಲಿ 3 ಸಂಶೋಧನಾ ವಿದ್ಯಾರ್ಥಿಗಳು ಪಿ.ಎಚ್.ಡಿ ಪದವಿ ಪಡೆದು ಕೊಂಡಿದ್ದಾರೆ. ಇನ್ನೂ ಸಮಾಜ ಶಾಸ್ತ್ರ ಮತ್ತು ಸಮಾಜ ವಿಜ್ಞಾನಗಳ ನಿಕಾಯದಲ್ಲಿ ನಡೆಯುವ 70 ಕ್ಕೂ ಹೆಚ್ಚು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ.

**ಸಂಘಟನೆ ಮತ್ತು ಸಮಾಜ ಸೇವೆ–**

ಎಂ.ಫಿಲ್ ಮತ್ತು ಪಿ.ಎಚ್.ಡಿ ಸಂಶೋಧನಾ ಅಧ್ಯಯನದಲ್ಲಿ ಡಾ, ಡಿ. ಲೋಕರಾಜ ಅವರು ಬಳ್ಳಾರಿ ಜಿಲ್ಲೆ ಗುಡಾರ– ಗುಡಿಸಲು ನಿವಾಸಿಗಳ ಕಲ್ಯಾಣ ಸಂಘ, ಕರ್ನಾಟಕ ಅಲೆಮಾರಿ, ಅರೆ–ಅಲೆಮಾರಿಗಳ ಒಕ್ಕೂಟ ಮತ್ತು ಸಿಂಧೋಳು ಸಮಾಜ ಕಲ್ಯಾಣ



ಸಂಘ ರಚನೆಯಲ್ಲಿ ಇವರ ಮಹತ್ತರ ಪಾತ್ರವನ್ನು ಹೊಂದಿದೆ.

ಇದರಲ್ಲಿ ಡಾ, ಕೆ.ಎಂ ಮೇತ್ರಿ ಅವರ ಮಾರ್ಗ ದರ್ಶನದಲ್ಲಿ ಶ್ರೀ ಜಿ ಮಾಧವರಾವ್, ದಿ. ಭಾಸ್ಕರ್ ದಾಸ್ ಎಕ್ಕಾರು, ಎಚ್ ಪಿ. ಶಿಕಾರಿ ರಾಮು, ಡಾ, ಡಿ. ಲೋಕರಾಜ, ರಾಹುಲ್. ನಾಗಪ್ಪ. ಮತ್ತು ಇತರೆ ಅಲೆಮಾರಿ ಸಮುದಾಯಗಳ ಮುಖಂಡರು ವಿವಿಧ ಸಂಘಟನೆಗಳ ರಚನೆಯಲ್ಲಿ ಭಾಗವಹಿಸಿದ್ದರು. ಬಳ್ಳಾರಿ ಜಿಲ್ಲೆಯ ಅಲೆಮಾರಿ ಸಮುದಾಯಗಳಿಗೆ ಸೂರು ಸಿಗಲು ಸರ್ಕಾರಕ್ಕೆ ಅನೇಕ ಮನವಿ ಪತ್ರಗಳನ್ನು ನೀಡಿದ್ದಾರೆ. ಡಾ, ಡಿ. ಲೋಕರಾಜ ಅವರು ಅಲೆಮಾರಿ ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಸಭೆ – ಸಮಾರಂಭಗಳಲ್ಲಿ ಭಾಗವಹಿಸಿದ್ದಾರೆ. ನಿವೇಶನ ಮತ್ತು ಆಶ್ರಯ ಮನೆ ಸೌಲಭ್ಯಕ್ಕಾಗಿ ಕೆಲವೊಮ್ಮೆ ಜಾಥಾ ಮೂಲಕ ಮನವಿ ಪತ್ರ ನೀಡಿರುವರು. 2011 ರಿಂದ ಪ್ರಸ್ತುತ ವರೆಗೆ ಅಲೆಮಾರಿ ಸಿಂಧೋಳು, ದಲಿತ ಹಾಗೂ ಇತರೆ ಬುಡಕಟ್ಟು ಸಮುದಾಯಗಳಿಗೆ ಮೂಲಭೂತ ಸೌಲಭ್ಯಗಳಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೂರಾರು ಮನವಿ ಪತ್ರಗಳನ್ನು ನೀಡಿದ್ದಾರೆ.

ಡಾ, ಡಿ. ಲೋಕರಾಜ ಅವರು ಸಮಾಜ ಶಾಸ್ತ್ರದ ಅರೆಕಾಲಿಕ ಮತ್ತು ಅತಿಥಿ ಉಪನ್ಯಾಸಕರಾಗಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಹಗರಿಬೊಮ್ಮನ ಹಳ್ಳಿಯಲ್ಲಿ ಸೇವೆ ಆರಂಭಿಸಿದರು. ಬಾಗಲಕೋಟೆ ಜಿಲ್ಲೆ ಹುನಗುಂದ ವಿ.ಎಮ್.ಎಸ್.ಆರ್ ವಸ್ತ್ರದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಜಗಳೂರಿನ ಸಹಾಯಕ / ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಪ್ರಸ್ತುತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮರಿಯಮ್ಮನಹಳ್ಳಿಯಲ್ಲಿ ಸಹ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ಸೇವೆ ಮಾಡಿದ ಕಾಲೇಜುಗಳಲ್ಲಿ "ಅಚ್ಚುಮೆಚ್ಚಿನ ಅಧ್ಯಾಪಕರು" ಸದಾ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಮತ್ತು ಬದುಕಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುತ್ತಿದ್ದಾರೆ. ಇವರು ಸೇವೆ ಮಾಡಿರುವ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಭಾಗ ಹಾಗೂ ವಿವಿಧ ಸಮಿತಿಗಳಿಗೆ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳ ಸಂಘಟಕರಾಗಿ ಕಾರ್ಯ ನಿರ್ವಹಣೆ ಮಾಡಿರುವುದು ವಿಶೇಷ. ಇವರ ಅಧ್ಯಯನ, ಸಂಶೋಧನೆ, ಸಾಹಿತ್ಯ ಮತ್ತು ಸಾಮಾಜಿಕ ಸೇವೆ ಗುರುತಿಸಿ ಕನ್ನಡ ಸಾಹಿತ್ಯ ಪರಿಷತ್ ಅಭಿನಂದನಾ ಪ್ರಶಸ್ತಿ, ತಾಲೂಕಾ ಮಟ್ಟದ ಡಾ. ಬಿ ಆರ್ ಅಂಬೇಡ್ಕರ್ ಪ್ರಶಸ್ತಿ (ಕೂಡ್ಲಿಗಿ ಮತ್ತು ಮೊಳಕಾಲ್ಮೂರು) ಅಲೆಮಾರಿ ಸಿರಿ, ಸಿಂಧೋಳ ಸಿರಿ, ಕರುನಾಡ ಕಣ್ಮಣಿ, ಕವಿರತ್ನ, ಸಿದ್ದಗಂಗಾ ಸೇವಾ ರತ್ನ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಹೀಗೆ ಅನೇಕ ಸಂಘ– ಸಂಸ್ಥೆಗಳು ಕೂಡ ಶ್ರೀಯುತರಿಗೆ ಪುರಸ್ಕರಿಸಿ ಸನ್ಮಾನಿಸಿರುವರು.

**ಮಾಹಿತಿ ಸಂಗ್ರಹ ಮತ್ತು ರಚನೆ–**

ಶ್ರೀ ಎಸ್ ರಾಜು ಸೂಲೇನಹಳ್ಳಿ
ಸಾಹಿತಿಗಳು ಹಾಗೂ ಕಾದಂಬರಿಕಾರರು,
ಸಂಸ್ಥಾಪಕರು,
ತನುಶ್ರೀ ಪ್ರಕಾಶನ ಸೂಲೇನಹಳ್ಳಿ
ತನುಶ್ರೀ ಸಾಹಿತ್ಯ, ಸಾಂಸ್ಕೃತಿಕ ಕಲಾ ವೇದಿಕೆ
(ರಿ) ಚಿತ್ರದುರ್ಗ

**ವರದಿ:ಶಿವಮೂರ್ತಿ.ಟಿ.ಕೋಡಿಹಳ್ಳಿ. ಚಿತ್ರದುರ್ಗ.**

# ಗುರುವಿನ ಸ್ಥಾನ ವಿಶ್ವದಲ್ಲಿ ಶ್ರೇಷ್ಠವಾದದ್ದು: ಬಿ. ಎನ್. ಮುತಾಲಿಕ್ ದೇಸಾಯಿ




**ಮೂಡಲಗಿ :** ಮನುಷ್ಯ ಜಗತ್ತಿನ ಶ್ರೇಷ್ಠ ನಾಗರಿಕನಾಗಲು ಬದುಕಿನಲ್ಲಿ ಗುರುವಿನ ಪಾತ್ರ ಅತಿ ಮಹತ್ವದ್ದಾಗಿದ್ದು, ಗುರುವಿನ ಸ್ಥಾನ ವಿಶ್ವದಲ್ಲಿ ಶ್ರೇಷ್ಠವಾಗಿದೆ ಎಂದು ನಿವೃತ್ತ ಮುಖ್ಯೋಪಾಧ್ಯಾಯ ಬಿ.ಎನ್. ಮುತಾಲಿಕ ದೇಸಾಯಿ ಹೇಳಿದರು

ಸಮೀಪದ ಕೌಜಲಗಿಯ ಅಂಬರೀಶರ್ಮ ದೇಸಾಯಿ ಪ್ರೌಢಶಾಲೆಯಲ್ಲಿ ಭಾನುವಾರ 1995 ನೆಯ ವರ್ಷದ ಹಳೆಯ ವಿದ್ಯಾರ್ಥಿಗಳ ಆಶ್ರಯದಲ್ಲಿ ಜರುಗಿದ ಗುರುಪೂರ್ಣಿಮೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿ, ಪ್ರಾಚೀನ ಕಾಲದಲ್ಲಿ ಗುರು ಶಿಷ್ಯರ ನಡುವೆ ಅನನ್ಯವಾದ ಸಂಬಂಧ ಏರ್ಪಡುತ್ತಿತ್ತು. ಗುರುಕುಲ ಗುರು–ಶಿಷ್ಯನ ನಡುವಿನ ವಿದ್ಯಾ ಕೇಂದ್ರವಾಗಿತ್ತು. ಇಂದು ಗುರುಕುಲದ ಸ್ಥಾನವನ್ನು ಶಾಲೆಗಳು ಪಡೆದುಕೊಂಡಿವೆ. ವಿದ್ಯೆ ನೀಡಿದ ಗುರು ಮತ್ತು ವಿದ್ಯಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಗೌರವ ನೀಡುವುದರ ಮೂಲಕ ತಾನು ಕಲಿತ ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಬೇಕೆಂದು ಹೇಳಿದರು.

ಹಳೆಯ ವಿದ್ಯಾರ್ಥಿಗಳ ಪರವಾಗಿ ರವಿ ಪರುಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳನ್ನು ತಿದ್ದುವ ಗುರು ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸುವ ಶ್ರೇಷ್ಠ ಸಮಾಜೋಧಾರಕನೂ ಆಗಿದ್ದಾರೆ. ಗುರುಗಳ ವಿದ್ಯಾ ದಾನದಿಂದಾಗಿ ನಾಡಿನ ಸತ್ಪ್ರಜೆಗಳಾಗಿ ಸಮಾಜದ ವಿವಿಧ ಉನ್ನತ ಸ್ಥಾನಗಳನ್ನು ಪಡೆದುಕೊಂಡಿರುತ್ತೇವೆ. ನಮ್ಮ ಯಶಸ್ಸು–ಕೀರ್ತಿಗೆ ಗುರುವಿನ ಕೊಡುಗೆ ಅಪಾರವಾಗಿದ್ದು, ಗುರು ಮತ್ತು ವಿದ್ಯೆ ನೀಡಿದ ಶಾಲೆಗೆ ನಾವು ಸದಾ ಚಿರಋಣಿಯಾಗಿರಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರಾದ ಶಾಂತವೀರ ಪರುಶೆಟ್ಟಿ, ಚಂದ್ರಶೇಖರ ಕೌಜಲಗಿ, ಎಂ.ಬಿ. ಭಜಂತ್ರಿ, ಮುಖ್ಯೋಪಾಧ್ಯಾಯ ಶಂಕರ ಗಾಣಿಗೇರ, ನ್ಯಾಷನಲ್ ಅಚೀವ್ಮೆಂಟ್ ಗೂಗಲ್ ಅವಾರ್ಡ್ ವಿಜೇತ ಎ. ಬಿ. ಜಮಾದಾರ, ಭಾರತೀಯ ಉನ್ನತ ಸೇನಾಧಿಕಾರಿ ಹುದ್ದೆಗೆ ಆಯ್ಕೆಯಾದ ಮದನ ಕುಮಾರ್ ಹೊಸಮನಿ ಮುಂತಾದವರನ್ನು 1995ರ ವರ್ಷದ ಹಳೆಯ ವಿದ್ಯಾರ್ಥಿಗಳ ಸಂಘಟನೆಯ ಪರವಾಗಿ ಸತ್ಕರಿಸಲಾಯಿತು.

ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯ ಶಂಕರ ಗಾಣಿಗೇರ ವಹಿಸಿದ್ದರು. ಹಳೆಯ ವಿದ್ಯಾರ್ಥಿಗಳಾದ ಅಶೋಕ ಹೊಸಮನಿ, ಅಲ್ಲಾಭಕ್ಷ ಹೂನ್ನೂರ, ರಾಘವೇಂದ್ರ ಮುತಾಲಿಕ ದೇಸಾಯಿ, ಮಹೇಶ ಕೌಜಲಗಿ, ಕೃಷ್ಣ ದೇಸಾಯಿ, ಸೈಯದ ನಗಾರ್ಚಿ, ಅಶೋಕ ಶಿವಾಪುರ, ಸಂಕ್ರಿ, ಪಾಂಡುರಂಗ ಮುಂತಾದ ಹಳೆ ವಿದ್ಯಾರ್ಥಿಗಳು ಹಾಗೂ ಶಾಲೆಯ ಶಿಕ್ಷಕ ಸಿಬ್ಬಂದಿ ಹಾಜರಿದ್ದರು.

# ಮಿಲಿಟರಿ ಕಾಲೇಜ: 8ನೇ ತರಗತಿಗಾಗಿ ಪ್ರವೇಶ

**ಬಾಗಲಕೋಟೆ :** ಉತ್ತರಾಖಂಡ ರಾಜ್ಯದ ಡೆಹರಾಡೂನಲ್ಲಿರುವ ರಾಷ್ಟ್ರೀಯ ಇಂಡಿಯನ್ ಮಿಲಿಟರಿಕಾಲೇಜನಲ್ಲಿ8ನೇತರಗತಿಪ್ರವೇಶಬಯಸುವ ಕರ್ನಾಟಕ ರಾಜ್ಯದ ಬಾಲಕ ಮತ್ತು ಬಾಲಕಿಯರಿಗೆ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಬೆಂಗಳೂರಿನ ಕೇಂದ್ರದಲ್ಲಿ ಡಿಸೆಂಬರ 1 ರಂದು ನಡೆಸಲಾಗುತ್ತದೆ. ಅಭ್ಯರ್ಥಿಗಳು ಸರಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿರುವ, ಉತ್ತೀರ್ಣರಾಗಿರುವವರು ಅರ್ಹರಾಗಿರುತ್ತಾರೆ.

ಅರ್ಜಿ ನಮೂನೆ ಹಾಗೂ ಪ್ರಾಸ್ಪೆಕ್ಟಸ್ ಮತ್ತು ಹಳೆಯ ಪ್ರಶ್ನೆ ಪತ್ರಿಕೆಗಳ ಕಿರುಪುಸ್ತಕಗಳನ್ನು ರಾಷ್ಟ್ರೀಯ ಭಾರತೀಯ ಮಿಲಿಟರಿ ಕಾಲೇಜ, ಗರಹಿ ಕ್ಯಾಂಟ್ ಡೆಹ್ರಾಡೂನ್, ಉತ್ತರಖಾಂಡ ಪಿಕೋಡ 248003 ಮೂಲಕ ಪಡೆದುಕೊಳ್ಳಬಹುದಾಗಿದೆ. ಭರ್ತಿ ಮಾಡಿದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಸೆಪ್ಟೆಂಬರ 30 ರೊಳಗಾಗಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಸೆಕ್ಟರ 58, ಫೀಲ್ಡ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಭವನ, ಬೆಂಗಳೂರು ಇವರಿಗೆ ಸಲ್ಲಿಸುವಂತೆ ಸೈನಿಕ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354–235434ಗೆ ಸಂಪರ್ಕಿಸಬಹುದಾಗಿದೆ.

# ಗುರು ಅಂಧಕಾರ ಕಳೆಯುವ ಮಹಿಮಾಪುರುಷ: ಕಾವ್ಯಶ್ರೀ ಅಮ್ಮನವರು

**ಮೂಡಲಗಿ :** ಗುರು ಎನ್ನುವುದು ಒಂದು ದೊಡ್ಡಶಕ್ತಿಯಾಗಿದ್ದುನಮ್ಮಅಂಧಕಾರವನ್ನು ಕಳೆದು ಬೆಳಕಿನ ದೀವಿಗೆಯನ್ನು ಹಚ್ಚುವ ಮಹಿಮಾಪುರುಷನಾಗಿದ್ದಾನೆ. ಗುರು ಪೂರ್ಣಿಮೆಯು ನಮ್ಮೆಲ್ಲಾ ಗುರುಗಳನ್ನು ನೆನೆಯುವ ಅವರ ಮಾರ್ಗದರ್ಶನದ ಮೆಲುಕು ಹಾಕುವ ಸಂದರ್ಭವಾಗಿದೆ" ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಶಿವಲಿಂಗ ಆಶ್ರಮ ನಾಗನೂರ ಮಠದ ಕಾವ್ಯಶ್ರೀ ಅಮ್ಮನವರು ತಿಳಿಸಿದರು.

ಅವರು ಸ್ಥಳೀಯ ಜ್ಞಾನದೀಪ್ತಿ ಪೌಂಡೇಶನ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಡಿಯಲ್ಲಿ ಗುರುಪೂರ್ಣಿಮೆಯ ನಿಮಿತ್ತ ಹಮ್ಮಿಕೊಂಡ ಹುಣ್ಣಿಮೆಯ ಬೆಳದಿಂಗಳ ಚಿಂತನ–ಮಂಥನ ಕಾರ್ಯಕ್ರಮದಲ್ಲಿ ದಿವ್ಯಸಾನಿಧ್ಯವಹಿಸಿ ಮಾತನಾಡುತ್ತಾ

**"ವೈದ್ಯರು ಇಲ್ಲದಿದ್ದರೆ ರೋಗಿಗಳಿಲ್ಲ ;**
**ಲಾಯರ್ ಇಲ್ಲದಿದ್ದರೆ ಕೋರ್ಟುಗಳಿಲ್ಲ ;**
**ಇಂಜಿನಿಯರ್ ಇಲ್ಲದಿದ್ದರೆ ಕಟ್ಟಡಗಳಿಲ್ಲ ;**

ಆದರೆ ಗುರು ಇಲ್ಲದಿದ್ದರೆ ಇವರು ಯಾರು ಇರುವುದಿಲ್ಲ ಏಕೆಂದರೆ ಗುರುವಾದವನು ಎಲ್ಲರ ಬದುಕಿನ ದಾರಿಯನ್ನು ತೋರಿಸಿ ಬದುಕನ್ನು ಸುಂದರಗೊಳಿಸುತ್ತಾನೆ.

ಗುರುವಿನ ಸೇವೆ ಯಾರು ಮಾಡುವರೋ ಅವರು ಖಂಡಿತಾ ದೊಡ್ಡ ಸ್ಥಾನಮಾನವನ್ನು



ಪಡೆದುಕೊಳ್ಳುತ್ತಾರೆ.

ಆದ್ದರಿಂದ ಗುರುವಿನ ಸೇವೆ ಮಾಡಿ ಬದುಕನ್ನು ಪರಿಪೂರ್ಣಗೊಳಿಸಿ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪರಿಷತ್ತಿನ ಸದಸ್ಯರಾದ ಬಿ.ಆರ್.ತರಕಾರಸರ್‌ಅವರುಪ್ರಾಸ್ತಾವಿಕವಾಗಿ ಎಲ್ಲರನ್ನೂ ಸ್ವಾಗತಿಸುತ್ತಾ ಮಾತನಾಡಿ ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿ, ಮುಂದೆ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳ ರೂಪರೇಷೆಗಳನ್ನು ತೆರೆದಿಟ್ಟರು. ಶ್ರಾವಣಮಾಸದಲ್ಲಿ ಪ್ರತಿ ಸೋಮವಾರ ಹಮ್ಮಿಕೊಳ್ಳಲಾಗುವ ವಚನ ಶ್ರಾವಣ ಕಾರ್ಯಕ್ರಮದ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಪರಿಷತ್ತಿನ ಕಾರ್ಯಕಾರಣಿ ಸಮಿತಿಯನ್ನು ಪುನಾರ್ರಚಿಸಿನೂತನಪದಾಧಿಕಾರಿಗಳನ್ನಾಗಿ ಶಿವಕುಮಾರ ಕೋಡಿಹಾಳ, ನಿಂಗಪ್ಪ ಸಂಗ್ರೇಜಿಕೊಪ್ಪ, ಶಶಿರೇಖಾ ಬೆಳ್ಳಕ್ಕಿ ಹಾಗೂ ಭಾಗೀರಥಿ ಕುಳಲಿ ಇತರರನ್ನು ಸ್ವಾಗತಿಸಲಾಯಿತು.

ಗೌರವ ಉಪಸ್ಥಿತಿಯನ್ನು ವಹಿಸಿದ್ದ ಶ್ರೀ ಸುಭಾಸಢವಳೇಶ್ವರಉಪಾಧ್ಯಕ್ಷರುಬಿ.ಡಿ.ಸಿ.ಸಿ ಬ್ಯಾಂಕ್ ಬೆಳಗಾವಿ ಅವರು ಮಾತನಾಡಿ ಪರಿಷತ್ತಿನ ಎಲ್ಲಾ ಕಾರ್ಯಚಟುವಟಿಕೆಗಳಿಗೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದಬಿ.ವಾಯ್‌ಶಿವಾಪೂರಗುರುಗಳು ಮಾತನಾಡಿ ಗುರುಪೂರ್ಣಿಮೆಯ ಔಚಿತ್ಯ ಗೌತಮಬುದ್ಧನ ಸಾಧನೆ, ಗುರುವಿನ ಋಣಕ್ಕೆ ಶಿರಬಾಗುವ ಬಗ್ಗೆ ತಿಳಿಸಿದರು.

ಇದೇಸಂದರ್ಭದಲ್ಲಿಸೀನಿಯರ್‌ನ್ಯಾಶನಲ್ ಕುಸ್ತಿಸ್ಪರ್ಧೆಯಲ್ಲಿಚಿನ್ನದಪದಕವಿಜೇತರಾದ ಕು.ಕಾಡೇಶ ಪಾಟೀಲ ಕುಸ್ತಿಪಟುವನ್ನು ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜ್ಞಾನದೀಪ್ತಿ ಪೌಂಡೇಶನ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ.ಸಂಜಯ ಸಿಂಧಿಹಟ್ಟಿ, ಮೂಡಲಗಿ ಸಾಯಿ ಸದ್ಭಕ್ತ ಮಂಡಳಿಯ ಸರ್ವಸದಸ್ಯರು, ಗೌರವ ಕಾರ್ಯದರ್ಶಿಗಳಾದ ಎ.ಎಚ್ ಒಂಟಗೋಡಿ, ಸಲಬಣ್ಣವರ, ಮೋಹಿತೆ ಕಿತ್ತೂರ, ಚಿದಾನಂದ ಹೂಗಾರ, ಗೋದಾವರಿ ದೇಶಪಾಂಡೆ, ಶೈಲಜಾ ಬಡಿಗೇರ,ಶಿವಲೀಲಾ ಚಂಡಕಿ,ರಾಜಶ್ರೀ ಕಲಾಲ್ ಮತ್ತಿತರರು ಪಾಲ್ಗೊಂಡಿದ್ದರು.

ಶ್ರೀ ಯಲ್ಲಪ್ಪ ಗದಾಡಿ ಉಪನ್ಯಾಸಕರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಕುಮಾರಿ ಮಯೂರಿ ಪ್ರಾರ್ಥಿಸಿದರು.

# ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಎನ್.ಎಸ್.ಎಸ್. ಶಿಬಿರ ಸಹಕಾರಿ: ಡಾ. ಸಂಜೀವ ತಳವಾರ

**ಮೂಡಲಗಿ :** ವಿದ್ಯಾರ್ಥಿಗಳು ಸೇವಾ ಮನೋಭಾವ ರೂಢಿಸಿಕೊಳ್ಳಲು ಮತ್ತು ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳಲು ಎನ್.ಎಸ್.ಎಸ್ ವಾರ್ಷಿಕ ವಿಶೇಷ ಶಿಬಿರಗಳು ಉತ್ತಮ ಅವಕಾಶ ಒದಗಿಸಿಕೊಡುತ್ತವೆ ಎಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ ಬೆಳಗಾವಿ ಜಿಲ್ಲೆಯ ಪ್ರಭಾರಿ ಸಂಯೋಜನಾಧಿಕಾರಿ ಡಾ. ಸಂಜೀವ ತಳವಾರ ತಿಳಿಸಿದರು.

ಕಲ್ಲೋಳಿಯ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ದತ್ತು ಗ್ರಾಮ ರಾಜಾಪೂರದಲ್ಲಿ ಶನಿವಾರ ಹಮ್ಮಿಕೊಂಡಿರುವ 2023–24ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಎನ್.ಎಸ್. ಎಸ್. ಸಹಕಾರಿಯಾಗಿದೆ. ನಾಯಕತ್ವ ಗುಣ, ಸಮಯದ ಸದುಪಯೋಗ, ಸಮಾಜಸೇವೆ, ಸಹಬಾಳ್ವೆ ಮುಂತಾದ




ಮೌಲ್ಯಗಳನ್ನು ಬೆಳೆಸುತ್ತದೆ ಎಂದರು.

ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸಗೌಡ ಶಿ. ಪಾಟೀಲ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಬಹಳ ಮುಖ್ಯವಾಗಿದೆ. ಓದಿನ ಜೊತೆಗೆ ಸಮಾಜದೊಂದಿಗೆ ಬೆರೆಯಬೇಕು ಆಗ ನೋವು ನಲಿವುಗಳು ನಮಗೆ ಅರ್ಥವಾಗುತ್ತವೆ. ಆ ಮೂಲಕ ಪ್ರತಿಯೊಬ್ಬರು ಉತ್ತಮ ನಾಗರಿಕರಾಗಿ ಹೊರಹೊಮ್ಮಬೇಕು ಎಂದು ಕರೆ ನೀಡಿದರು.

ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಿವಾನಂದ ಕಮತಿ ಮಾತನಾಡಿ, ಸ್ವಯಂಸೇವಕರು ಶ್ರದ್ಧೆ, ಪ್ರಾಮಾಣಿಕತೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜೀವಿತದ ಸ್ವಲ್ಪ ಸಮಯವನ್ನು ಸಮಾಜಸೇವೆಯಲ್ಲಿ ಕಳೆಯಬೇಕು ಆಗ ಜನ್ಮ ಸಾರ್ಥಕವಾಗುತ್ತದೆ ಎಂದರು.

ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಪ್ರಾಸ್ತಾವಿಕ ಮಾತುಗಳನ್ನಾಡಿ ಶಿಬಿರದ ದೇಯೋದ್ದೇಶಗಳನ್ನು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜಾಪೂರ ಗ್ರಾಮ ಪಂಚಾಯತ ಅಧ್ಯಕ್ಷೆ ನಾಗವ್ವ ಕಟ್ಟಿಕಾರ ವಹಿಸಿಕೊಂಡಿದ್ದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಉಪಾಧ್ಯಕ್ಷೆ ಗಂಗವ್ವ ಮಹಾದೇವ ವಗ್ಗ, ಸರಕಾರಿ ಪ್ರೌಢ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷ ಪ್ರಕಾಶ ಹುನ್ನೂರ, ಎನ್.ಎಸ್. ಎಸ್. ಕೋಶದ ಕಛೇರಿ ಸಿಬ್ಬಂಧಿ ಪ್ರವೀಣ, ವಿಶ್ವನಾಥ ಸಣ್ಣಕ್ಕಿ, ಅಧ್ಯಾಪಕರು ಹಾಗೂ ಸ್ವಯಂಸೇವಕರು ಹಾಜರಿದ್ದರು.

ಡಾ. ಕೆ.ಎಸ್.ಪರವ್ವಗೋಳ ನಿರೂಪಿಸಿದರು, ವೀಣಾ ಕಂಕಣವಾಡಿ ಪ್ರಾರ್ಥಿಸಿದರು, ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ ಸ್ವಾಗತಿಸಿದರು, ಸಹ ಕಾರ್ಯಕ್ರಮಾಧಿಕಾರಿ ಡಿ.ಎಸ್.ಹುಗ್ಗಿ ವಂದಿಸಿದರು.

# 'ಕನ್ನಡ ಕಣ್ಮಣಿ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ




**ಜಮಖಂಡಿ :** ಜಮಖಂಡಿ ಉಪವಿಭಾಗದಲ್ಲಿ ಬರುವ ಮೂರು ತಾಲ್ಲೂಕುಗಳ ಪ್ರೌಢಶಾಲೆಗಳ ಪ್ರತಿಭಾನ್ವಿತ ಕನ್ನಡ ಭಾಷೆ ಬೋಧಕರಿಗೆ 'ಕನ್ನಡ ಕಣ್ಮಣಿ' ಪ್ರಶಸ್ತಿ ಪ್ರದಾನ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಭಾನುವಾರ ಜುಲೈ 28 ರಂದು ಬೆಳಿಗ್ಗೆ 9.30 ಗಂಟೆಗೆ ಇಲ್ಲಿನ ಜ್ಞಾನ ಗಂಗೋತ್ರಿ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ಸಂಘಟಕ, ನಿವೃತ್ತ ಪ್ರಾಚಾರ್ಯ ಡಾ.ಸಂಗಮೇಶ ಮಟೋಳಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಶ್ರೀವೀರೇಶ್ವರ ಪ್ರಕಾಶನ, ಸಾಹಿತ್ಯ ಸೌರಭ ವೇದಿಕೆ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು, ಜ್ಞಾನ ಗಂಗೋತ್ರಿ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸತತ ಮೂರನೇ ವರ್ಷದ ಕಾರ್ಯಕ್ರಮ ಇದಾಗಿದೆ ಎಂದರು.

ಜಮಖಂಡಿ ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಜಮಖಂಡಿ ತಾಲ್ಲೂಕಿನ 31, ಮುಧೋಳ ತಾಲ್ಲೂಕಿನ 23 ಹಾಗೂ ರಬಕವಿ–ಬನಹಟ್ಟಿ ತಾಲ್ಲೂಕಿನ 26 ಜನ ಸೇರಿದಂತೆ ಒಟ್ಟು 80 ಜನ ಪ್ರೌಢಶಾಲಾ ಕನ್ನಡ ಭಾಷಾ ಬೋಧಕರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕನ್ನಡ ವಿಷಯಕ್ಕೆ ಪ್ರಾಧಾನ್ಯತೆ ನೀಡುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕನ್ನಡ ಭಾಷೆಯ ಬೋಧಕರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತಿದೆ.

ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸುವರು.

ಸಾರ್ವಜನಿಕ ಶಿಕ್ಷಣ ಇಲಖೆಯ ವಿಶ್ರಾಂತ ನಿರ್ದೇಶಕ ಸಿದ್ಧರಾಮಮನಹಳ್ಳಿಕಾರ್ಯಕ್ರಮಉದ್ಘಾಟಿಸುವರು. ಬಿಇಒ ಎ.ಕೆ. ಬಸಣ್ಣವರ, ಬನಹಟ್ಟಿಯ ಎಸ್‌ಟಿಸಿ ಕಾಲೇಜಿನ ಪ್ರೊ.ವಿಶ್ವಜ ಕಾಡದೇವರ, ಕ್ಷೇತ್ರ ಸಮನ್ವಯಾಧಿಕಾರಿ ರಮೇಶ ಅವಟಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಜಮಖಂಡಿ ತಾಲ್ಲೂಕು ಘಟಕದ ಅಧ್ಯಕ್ಷ ನರಸಿಂಹ ಕಲ್ಲೊಳ್ಳಿ, ಪ್ರೌಢಶಾಲಾ ಸಹಶಿಕ್ಷಕರ ಸಂಘದ ರಬಕವಿ–ಬನಹಟ್ಟಿ ತಾಲ್ಲೂಕು ಘಟಕದ ಅಧ್ಯಕ್ಷ ಬಾಬಾಗೌಡ ಪಾಟೀಲ, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಮುಧೋಳ ಘಟಕದ ಅಧ್ಯಕ್ಷ ಪಿ.ಎಲ್. ಬಗಲಿ, ಜ್ಞಾನ ಗಂಗೋತ್ರಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಎಂ.ಎಂ. ಬಳಗಾರ, ಬಿಎಲ್‌ಡಿಇ ಕಾನೂನು ಕಾಲೇಜಿನ ಪ್ರೊ.ರಾಜಶೇಖರ ಹೊರಟ್ಟಿ ಅತಿಥಿಗಳಾಗಿ ಭಾಗವಹಿಸುವರು ಎಂದು ವಿವರಿಸಿದರು.

ಕನ್ನಡ ಜಾನಪದ ಪರಿಷತ್ತು ತಾಲ್ಲೂಕು ಘಟಕದ ಅಧ್ಯಕ್ಷ ಬಿ.ಎನ್. ಅಸ್ಕಿ, ಕಸಾಪ ತಾಲ್ಲೂಕು ಘಟಕದ ಕೋಶಾಧ್ಯಕ್ಷ,ಸಾಹಿತಿಬಾಹುಬಲಿಬಿರಾದಾರಪಾಟೀಲ, ಬಸವಜ್ಯೋತಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

# ಅನಾಮದೇಯ ಮೃತ ವ್ಯಕ್ತಿಯ ಪತ್ತೆಗೆ ನೆರವು

**ಬಾಗಲಕೋಟೆ :** ಬಾಗಲಕೋಟೆ ಹೊಳೆ ಆಂಜನೇಯ ದೇವಸ್ಥಾನದ ಹತ್ತಿರ ಆರಾಮವಿಲ್ಲದೇ ಮಲಗಿಕೊಂಡಿದ್ದು, ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದಾಗ ಚಿಕಿತ್ಸೆ ಫಲಕಾರಿಯಾಗದೇ ಜುಲೈ 19 ರಂದು ಮೃತಪಟ್ಟಿರುತ್ತಾರೆ. ಮೃತ ವ್ಯಕ್ತಿಯ ಮೈ ಮೇಲೆ ಬಿಳಿ ಶರ್ಟ, ಚೆಕ್ಸ ಲುಂಗಿ ಧರಿಸಿದ್ದು, ತೆಳ್ಳಗೆ, ಗೋದಿ ಕೆಂಪು ಮೈಬಣ್ಣ, ಉದ್ದ ಮುಖ ಅಂದಾಜು 3 ಇಂಚು ದಾಡಿ, 5.7 ಪೂಟ್



ಉದ್ದ ಹೊಂದಿರುತ್ತಾರೆ. ಇತನ ವಾರಸುದಾರರ ಬಗ್ಗೆ ತಿಳಿದುಬಂದಲ್ಲಿ ಜಿಲ್ಲಾ ಪೊಲೀಸ್ ವರೀಷ್ಠಾಧಿಕಾರಿಗಳ ಕಚೇರಿ ದೂಸಂ.08354–235077, ಕಂಟ್ರೋಲ್ ರೂಮ್ 08354–235079, ಶಹರ ಪೊಲೀಸ್ ಠಾಣೆ ದೂಸಂ.08354–220333. 9480803945ಗೆ ಮಾಹಿತಿ ನೀಡುವಂತೆ ನಗರ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಘಟಪ್ರಭಾ ನದಿಗೆ ಹೆಚ್ಚಿದ ನೀರು: ಮೂರು ಸೇತುವೆಗಳು ಜಲಾವೃತ

**ಮಹಾಲಿಂಗಪುರ :** ಪಶ್ಚಿಮ ಘಟ್ಟಗಳ ಪ್ರದೇಶ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗುತ್ತಿರುವ ಕಾರಣ ಕಳೆದ ಒಂದು ವಾರದಿಂದ ಘಟಪ್ರಭಾ ನದಿಯು ತುಂಬಿ ಹರಿಯುತ್ತಿದೆ. ಕಳೆದ ಶನಿವಾರದಿಂದ ಸಮೀಪದ ನಂದಗಾಂವ–ಅವರಾದಿ ಸೇತುವೆಯು ಸಂಪೂರ್ಣ ಜಲಾವೃತ್ತವಾಗಿದೆ.

**ಢವಳೇಶ್ವರ–ಮಿರ್ಜಿ ಸೇತುವೆಗಳು ಜಲಾವೃತ :** ಮಂಗಳವಾರ ಮುಂಜಾನೆಯಿಂದ ಸಮೀಪದ ಢವಳೇಶ್ವರ–ಢವಳೇಶ್ವರ, ಮಿರ್ಜಿ–ಅಕ್ಕಿಮರಡಿ ಹೊಸ ಸೇತುವೆ ಜಲಾವೃತವಾಗಿವೆ. ಉಭಯ ಸೇತುವೆಗಳ ಮೇಲೆ ಒಂದು ಅಡಿಗೂ ಅಧಿಕ ನೀರು ಹರಿಯುತ್ತಿರುವ ಕಾರಣ, ಪೊಲೀಸ್ ಬ್ಯಾರಿಕೇಡ್ ಅಳವಡಿಸಿ, ಪೊಲೀಸ್ ಸಿಬ್ಬಂದಿಯನ್ನು ನೇಮಿಸಿ ಸೇತುಗಳ ಮೇಲಿನ ಸಂಚಾರವನ್ನು ಸಂಪೂರ್ಣ ನಿಷೇಧಿಸಲಾಗಿದೆ.

**ಹಲವು ಗ್ರಾಮಗಳ ಸಂಪರ್ಕ ಕಡಿತ :** ಢವಳೇಶ್ವರ, ಮಿರ್ಜಿ, ನಂದಗಾಂವ ಸೇರಿ ಮೂರು ಸೇತುವೆಗಳ ಜಲಾವೃತದಿಂದಾಗಿ ಮಹಾಲಿಂಗಪುರದಿಂದ ಮುಧೋಳ



ತಾಲೂಕಿನ ಮಿರ್ಜಿ, ಒಂಟಗೋಡಿ, ಚನ್ನಾಳ, ಮಲ್ಲಾಪೂರ ಗ್ರಾಮಗಳು ಹಾಗೂ ಬೆಳಗಾವಿ ಜಿಲ್ಲೆಯ ಗಡಿಭಾಗದ ಮೂಡಲಗಿ ತಾಲೂಕಿನ ಢವಳೇಶ್ವರ, ಬಿಸನಕೊಪ್ಪ, ಹುಣಶ್ಯಾಳ ಪಿವೈ, ವೆಂಕಟಾಪೂರ, ಅವರಾದಿ, ಅಳ್ಳಿಮಟ್ಟಿ, ಯರಗುದ್ರಿ, ತಿಮ್ಮಾಪೂರ, ಹೊಸ ಯರಗುದ್ರಿ, ಕುಲಗೋಡ, ಕೌಲಜಗಿ ಗ್ರಾಮಗಳಿಗೆ ಹೋಗುತ್ತಿದ್ದ ಸಂಪರ್ಕ ರಸ್ತೆಗಳ ಕಡಿತವಾಗಿ ಈ ಗ್ರಾಮಗಳಿಗೆ ಹೋಗುವವರು ಗೋಕಾಕ, ಮುಧೋಳ, ಯಾದವಾಡ ಮಾರ್ಗವಾಗಿ 50–60ಕಿಮೀ ಸುತ್ತುವರೆದು ಬರುವಂತಹ ಸ್ಥಿತಿ ನಿರ್ಮಾಣವಾಗಿದೆ.

**ಘಟಪ್ರಭಾ ನದಿಗೆ 21 ಸಾವಿರ ಕ್ಯೂಸೆಕ್ ನೀರು :** ದುಪದಾಳ ಜಲಾಶಯದಿಂದ 15,370 ಕ್ಯೂಸೆಕ್, ಮಾರ್ಕಂಡೇಯ ಜಲಾಶಯದಿಂದ 38,37 ಬಳ್ಳಾರಿ ನಾಲಾದಿಂದ 19,11 ಕ್ಯೂಸೆಕ್ ಸೇರಿ ಸರಿ ಸುಮಾರು 21,118 ಕ್ಯೂಸೆಕ್ ನೀರು ಘಟಪ್ರಭಾ ನದಿಗೆ ಹರಿದು ಬರುತ್ತಿದೆ. ಆದರೆ ಇದುವರೆಗೂ ಹಿಡಕಲ್ ಜಲಾಶಯದಿಂದ ನದಿಗೆ ನೀರನ್ನು ಬಿಟ್ಟಿಲ್ಲ. ಗರಿಷ್ಠ 51 ಟಿಎಂಸಿ ನೀರಿನ ಸಂಗ್ರಹ ಸಾಮರ್ಥ್ಯಯುಳ್ಳ ಹಿಡಕಲ್ ಜಲಾಶಯದಲ್ಲಿ ಮಂಗಳವಾರದರವರೆಗೆ 38.73 ಟಿಎಂಸಿ ನೀರಿನ ಸಂಗ್ರಹವಾಗಿದೆ. ಸದ್ಯ ಜಲಾಶಯಕ್ಕೆ 27,754 ಕ್ಯೂಸೆಕ್ ಒಳಹರಿವು ಇದ್ದು, ಜಲಾಶಯಕ್ಕೆ ಬರುವ ಒಳಹರಿವು ಹೀಗೆ ಮುಂದುವರೆದರೆ ಮುಂದಿನ 4–5 ದಿನಗಳಲ್ಲಿ ಹಿಡಕಲ್ ಜಲಾಶಯ ಭರ್ತಿಯಾಗಿ, ಹೆಚ್ಚಿನ ನೀರನ್ನು ಘಟಪ್ರಭಾ ನದಿಗೆ ಬಿಡುವದರಿಂದ ಘಟಪ್ರಭಾ ನದಿ ಪಾತ್ರದ ಗ್ರಾಮಗಳಿಗೆ ಪ್ರವಾಹ ಭೀತಿ ಎದುರಾಗಲಿದೆ.

### ಮುಂಜಾಗ್ರತೆ ಅಗತ್ಯ

**ಘಟಪ್ರಭಾ ನದಿ ಪಾತ್ರದ ಗ್ರಾಮಗಳ ಜನತೆಯು ಸುರಕ್ಷಿತರಾಗಿಬೇಕು. ಸೇತುವೆಗಳ ಮೇಲೆ ನೀರು ಕಡಿಮೆ ಇದೆ ಎಂದು ಯಾರು ದಾಟುವ ಸಾಹಸ ಮಾಡಬೇಡಿ. ಜಲಾವೃತ ಸೇತುವೆಗಳ ಹತ್ತಿರ ಈಗಾಗಲೇ ಪೊಲೀಸ್ ಸಿಬ್ಬಂದಿಯನ್ನು ನೇಮಕಮಾಡಿ, ಬ್ಯಾರಿಕೇಡ್ ಅಳವಡಿಸಿ ಸೇತುವೆಗಳ ಮೇಲಿನ ಸಂಚಾರವನ್ನು ನಿಷೇಧಿಸಲಾಗಿದೆ.ಸಣ್ಣ ನೀರಾವರಿ ಇಲಾಖೆ ಮತ್ತು ತಾಪಂ ಅಧಿಕಾರಿಗಳು ಹೆಚ್ಚಿನ ನಿಗಾವಹಿಸಬೇಕು. ಜೊತೆಗೆ ಸಾರ್ವಜನಿಕರು ಮುಂಜಾಗ್ರತೆವಹಿಸುವದು ಅಗತ್ಯ.**

**–ಶ್ವೇತಾ ಬೀಡಿಕಾರ್. ಎಸಿ, ಜಮಖಂಡಿ**

# ಪಟ್ಟಣದ ಹಲವು ಅಭಿವೃದ್ಧಿ ಕಾರ್ಯಗಳಿಗೆ ಸಚಿವರ ಸ್ಪಂದನೆ: ಚನಬಸು ಹುರಕಡ್ಲಿ

**ಮಹಾಲಿಂಗಪುರ :** ಪಟ್ಟಣದ ಸಮಗ್ರ ಅಭಿವೃದ್ಧಿ ಕಾಮಗಾರಿಗಳ ಕುರಿತು ಸಲ್ಲಿಸಿದ ಎಲ್ಲಾ ಮನವಿ ಪತ್ರಗಳಿಗೆ ಸಂಬಂಧಿಸಿದ ಸಚಿವರುಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಚನಬಸು ಹುರಕಡ್ಲಿ ತಿಳಿಸಿದ್ದಾರೆ.

ಪಟ್ಟಣದ ಮುಖಂಡರ ಪಕ್ಷಾತೀತ ನಿಯೋಗದೊಂದಿಗೆ ಇತ್ತಿಚಿಗೆ ಬೆಂಗಳೂರಿಗೆ ತೆರಳಿ ವಿವಿಧ ಇಲಾಖೆ ಸಚಿವರುಗಳಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಹಿಂದು ರುದ್ರಭೂಮಿ ಅಭಿವೃದ್ಧಿಗೆ ಅಂದಾಜು 2 ಕೋಟಿರೂ.ನೀಡುವುದಾಗಿ ಕಂದಾಯಸಚಿವಕೃಷ್ಣಭೈರೇಗೌಡ, ಕೆರೆ ಪಕ್ಕದಲ್ಲಿರುವ ಪುರಸಭೆಯ ಎರಡು ಎಕರೆ ಖಾಲಿ ಜಾಗೆಯಲ್ಲಿ ಉದ್ಯಾನವನ ನಿರ್ಮಾಣಕ್ಕೆ ಅಂದಾಜು 1.50 ಕೋಟಿ ರೂ. ನೀಡುವುದಾಗಿ ಪ್ರವಾಸೋದ್ಯಮ



ಸಚಿವ ಎಚ್.ಕೆ.ಪಾಟೀಲ, ಸರ್ಕಾರಿ ಹಳೆಯ ಕಟ್ಟಡವನ್ನು ಪುರಸಭೆಗೆ ಹಸ್ತಾಂತರಿಸಲು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಭರವಸೆ ನೀಡಿದ್ದಾರೆ ಎಂದರು.

ಮಹಾಲಿಂಗಪುರ ಸಮಗ್ರ ಅಭಿವೃದ್ಧಿಗೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಸೂಕ್ತ ಸ್ಪಂದನೆ ನೀಡಿದ್ದಾರೆ. ಶಾಸಕ ಸಿದ್ದು ಸವದಿ ಅವರಿಗೂ ಸಹ ಮನವಿ ಸಲ್ಲಿಸಿದ್ದು, ಅಭಿವೃದ್ಧಿಗೆ ಪ್ರಯತ್ನಿಸಲಾಗುವುದು ಎಂದಿದ್ದಾರೆ.ಒಟ್ಟಾರೆ, ಅಭಿವೃದ್ಧಿ ಕಾಮಗಾರಿಗಳಿಗೆ ಸಾರ್ವಜನಿಕರು ಸಹಕರಿಸಬೇಕು ಎಂದು ಹುರಕಡ್ಲಿ ಹೇಳಿದರು.

ಪಕ್ಷಾತೀತನಿಯೋಗದಲ್ಲಿಪಟ್ಟಣದ ಮುಖಂಡರಾದ ಯಲ್ಲನಗೌಡ ಪಾಟೀಲ, ಬಲವಂತಗೌಡ ಪಾಟೀಲ, ಮುಸ್ತಾಕ ಚಿಕ್ಕೋಡಿ, ಅರ್ಜುನ ದೊಡಮನಿ, ಸಂಜು ಬಾರಕೋಲ, ವಿಜಯಕುಮಾರ ಸಬಕಾಳೆ, ನಜೀರ ಝಾರೆ, ಹಣಮಂತ ತೇಲಿ, ಶಿವಲಿಂಗ ಟಿರಕಿ,ಬಂದುಪಕಾಲಿ,ಬಸವರಾಜ ಗಿರಿಸಾಗರ, ಶಿವು ಕಡಬಲ್ಲವರ, ಸಿದ್ದು ಬೆನ್ನೂರ, ಆನಂದ ಹಟ್ಟಿ, ಆನಂದ ಬಂಡಿ, ಸಿದ್ದು ಧಡೂತಿ ನಿಯೋಗದಲ್ಲಿದ್ದರು.

## ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕಿಲ್ಲ ಕಿಮ್ಮತ್ತು



ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕಿಲ್ಲ ಕಿಮ್ಮತ್ತು, ಬಿಹಾರ್, ಆಂಧ್ರಕ್ಕೆ ಗಮ್ಮತ್ತು. ಪ್ರಸಕ್ತ ಬಜೆಟ್ ರಾಜ್ಯಕ್ಕೆ ಹಿಂದೆಂದಿಗಿಂತಲೂ ಮಲತಾಯಿ ದೋರಣೆ ಅನುಸರಿಸಲಾಗಿದೆ. ಈ ಭರಿ ಹೊಸದಾಗಿ ಒಂದೇ ಒಂದು ಯೋಜನೆಗಳನ್ನು ರಾಜ್ಯಕ್ಕೆ ನೀಡಿಲ್ಲ. ನೆನಗುದಿಗೆ ಬಿದ್ದಿರುವ ಯೋಜನೆಗಳ ಬಗ್ಗೆ ಪ್ರಸ್ತಾಪವಿಲ್ಲದ ಸಪ್ಪೆ ಬಜೆಟ್ ಇದಾಗಿದೆ.

– ಸಿದ್ದು ಕೊಣ್ಣೂರ
ಕಾಂಗ್ರೆಸ್ ಮುಖಂಡರು
ತೇರದಾಳ ಮತಕ್ಷೇತ್ರ.

# ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಯೋಗ ಸಹಕಾರಿ: ಕುಲಪತಿ ಡಾ. ಪಿ. ಎಲ್. ಪಾಟೀಲ

**ವಿಜಯಪುರ:**ಇಂದಿನಸ್ಪರ್ಧಾತ್ಮಕಯುಗದಲ್ಲಿ ಅನೇಕರು ವಿವಿಧ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದು, ಇದರಲ್ಲಿ ಕೆಲವೊಬ್ಬರು ಮಾತ್ರ ತೇರ್ಗಡೆ ಹೊಂದುತ್ತಾರೆ. ಉತ್ತಮ ಹುದ್ದೆ ಪಡೆಯಲು ಏಕಾಗ್ರತೆ ಮುಖ್ಯವಾಗಿದೆ. ಇದನ್ನು ಯೋಗದಿಂದ ಮತ್ತು ಧ್ಯಾನದಿಂದ ಸಾಧಿಸಬಹುದಾಗಿದೆ ಎಂದು ಧಾರವಾಡ ಕೃಷಿ ವಿವಿ ಕುಲಪತಿ ಡಾ. ಪಿ. ಎಲ್. ಪಾಟೀಲ ಕರೆ ನೀಡಿದರು.

ಗೆಜ್ಜಿ ಕರಿಯರ್ ಅಕಾಡೆಮಿ ವತಿಯಿಂದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪರೀಕ್ಷೆ ಎಂಬ ಹಬ್ಬಕ್ಕೆ ಯೋಗ ಮತ್ತು ಧ್ಯಾನ ಎಂಬ ಕಾರ್ಯಾಗಾರಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು. ಎಲ್ಲ ಪರೀಕ್ಷೆಗಳಂತೆ ಕೃಷಿ ಅಧ್ಯಯನ ಕೂಡಾ ಒಂದು ಅತ್ಯುತ್ತಮ ವಿಷಯವಾಗಿದ್ದು, ವಿಜ್ಞಾನವನ್ನು ಐಚ್ಛಿಕ ವಿಷಯವನ್ನಾಗಿ ಓದಿದವರು. ಕೃಷಿಯಲ್ಲಿ ಮತ್ತು ಕೃಷಿ ಸಂಬಂಧಿತ ಕೋರ್ಸ್‌ಗಳನ್ನು ಅಧ್ಯಯನ ಮಾಡಬಹುದು. ಇಲ್ಲಿರುವ ಪ್ರತಿಯೊಬ್ಬ ಅಭ್ಯರ್ಥಿ ರೈತರ ಮಕ್ಕಳೇ ಆಗಿದ್ದು, ಅವರಿಗೆ ಕೃಷಿ ಪದವಿ ವ್ಯಾಸಂಗಕ್ಕೆ ಶೇ. 50 ರಷ್ಟು ಸೀಟುಗಳು ಲಭ್ಯವಿರುತ್ತವೆ ಎಂದರು.

ಇಲ್ಲಿ ಪದವಿ ಪಡೆದ ಅನೇಕ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸುಲಭವಾಗಿ ಎದುರಿಸಿ, ಅನೇಕ ನಾಗರಿಕ ಸೇವೆಗಳಲ್ಲಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದಾರೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಹಿಂದಿನ ವಿದ್ಯಾಧಿಕಾರಿ ಡಾ. ಹೆಚ್. ಬಿ. ಬಬಲಾದ ಮಾತನಾಡಿ,



ಇಂದು ಕಷ್ಟಪಟ್ಟು ಓದಿದರೆ ಜೀವನ ಪೂರ್ತಿ ನೆಮ್ಮದಿಯಾಗಿ ಇರಬಹುದು. ಅದಕ್ಕಾಗಿ ತಾವೆಲ್ಲರೂ ತಮಗೆ ಮಾರ್ಗದರ್ಶನ ನೀಡಿದ ಶಿಕ್ಷಕರ ಸಲಹೆಯನ್ನು ತಪ್ಪದೇ ಪಾಲಿಸಬೇಕೆಂದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ ಕಾತ್ರಾಳ ಬಾಲಗಾಂವ ಆಶ್ರಮದ ಅಮೃತಾನಂದ ಸ್ವಾಮಿಜಿ ಮಾತನಾಡಿ, ಯೋಗವು ಭಾರತೀಯರ ಶ್ರೇಷ್ಠ ಕೊಡುಗೆಯಾಗಿದ್ದು, ಅದೊಂದು ವಿಜ್ಞಾನವಾಗಿದೆ. ಋಷಿಮುನಿಗಳು ಅನೇಕ ವರ್ಷಗಳವರೆಗೆ ತಪಸ್ಸುಗೈದು, ಅದನ್ನು ನಮಗೆಲ್ಲರಿಗೂ ಕೊಟ್ಟಿರುವರು. ಅದರಲ್ಲಿ ಅನೇಕ ವಿಸ್ಮಯಗಳಿವೆ. ಒಂದು ವೇಳೆ ತಾರುಣ್ಯದಲ್ಲಿಯೇ ನಾವು ಯೋಗ ಸಾಧನೆಯನ್ನು ಅಳವಡಿಸಿಕೊಂಡಲ್ಲಿ, ಜೀವನದಲ್ಲಿ ಖಂಡಿತವಾಗಿ ಯಶಸ್ಸನ್ನು ಸಾಧಿಸಬಹುದಾಗಿದೆ ಎಂದರು.

ಒಂದು ತಿಂಗಳ ಕಾಲ ಯೋಗ ತರಬೇತಿ ಹಮ್ಮಿಕೊಂಡಿರುವ ಬಿ.ಎಲ್.ಡಿ.ಈ. ಡೀಮ್ಡ್ ವಿವಿಯೋಗಶಿಕ್ಷಕಮಡಿವಾಳಪ್ಪದೊಡಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೃಷಿ ಮಹಾವಿದ್ಯಾಲಯ ಡೀನ್ ಡಾ. ಎ. ಭೀಮಪ್ಪ, ಸಹ ವಿಸ್ತರಣಾ ನಿರ್ದೇಶಕ ಡಾ. ರವೀಂದ್ರ ಬೆಳ್ಳಿ, ಗೆಜ್ಜಿ ಕ-ರಿಯರ್ ಅಕಾಡೆಮಿ ಸಂಸ್ಥಾಪಕ ಸುರೇಶ ಗೆಜ್ಜಿ ಸೇರಿದಂತೆ 750 ಅಭ್ಯರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಕ್ಕಳು ಇತ್ತೀಚೆಗೆ ಮೊಬೈಲ್ ಗೀಳಿಗೆ ತುತ್ತಾಗಿ ಗಂಭೀರ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದು, ಇದರಿಂದ ಹೊರಬರಲು ಪಾಲಕರು ಕಡ್ಡಾಯವಾಗಿ ತಮ್ಮ ಮಕ್ಕಳಿಗೆ ಚಿಕ್ಕಂದಿನಿಂದಲೇ ಯೋಗ, ಪ್ರಾಣಾಯಾಮ ಮತ್ತು ಆಯುರ್ವೇದ ಸಸ್ಯಗಳ ಬಳಕೆ ಬಗ್ಗೆ ತಿಳುವಳಿಕೆ ನೀಡಬೇಕೆಂದು ಚಡಚಣ ತಾಲೂಕಿನ ಇಂಚಗೇರಿ ಗ್ರಾಮದ ಪ್ರಗತಿಪರ ರೈತ ಮತ್ತು ಆಯುರ್ವೇದ ತಜ್ಞ ಕಿವಿಮಾತು ಹೇಳಿದರು.

ನಿಡಗುಂದಿ ತಾಲೂಕಿನ ಮುಕಾರ್ತಿಹಾಳ ಗ್ರಾಮದ ಮಾತೋಶ್ರೀ ಶಕುಂತಲಾಬಾಯಿ ಬೆಳ್ಳಿ ಪಬ್ಲಿಕ್ ಶಾಲೆಯಲ್ಲಿ ಉತ್ತಮ ಆರೋಗ್ಯಕ್ಕಾಗಿ ಮಕ್ಕಳ ಭವಿಷ್ಯಕ್ಕಾಗಿ ಆಯುರ್ವೇದ ಬಳಕೆ ಕುರಿತ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಇಂದು ವಾತಾವರಣ ಬದಲಾವಣೆಯಿಂದ ಮಕ್ಕಳು ಶೀತ, ಕೆಮ್ಮು, ಜ್ವರ ಹಾಗೂ ಡೆಂಘೀಯಂತಹ ಕಾಯಿಲೆಗಳಿಂದ ಬಳಲುತ್ತಿರುವುದನ್ನು ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಮ್ಮಿಯಾಗುತ್ತಿದೆ. ಪಾಲಕರು ಮಕ್ಕಳಿಗೆ ಮನೆಯಲ್ಲಿ ಯೋಗ, ಪ್ರಾಣಾಯಮ ಅಭ್ಯಾಸ ಮಾಡಿಸಬೇಕು. ಸಾವಯವ ಕ್ರಮಗಳನ್ನಳವಡಿಸಿ ಬೆಳೆದ ದ್ವಿದಳ ಧಾನ್ಯ ಮೊಳಕೆ ಕಾಳುಗಳನ್ನು ಕೊಡಬೇಕು. ಮಕ್ಕಳು ಸದೃಢರಾಗಿದ್ದಾಗ ಮಾತ್ರ ಅವರು ವಿದ್ಯಾವಂತರಾಗುತ್ತಾರೆ, ಜ್ಞಾನವಂತರಾಗುತ್ತಾರೆ ಮತ್ತು ಈ ದೇಶದ ಅಭಿವೃದ್ಧಿಗೆ ತಮ್ಮ ಅಮೂಲ್ಯ ಕೊಡುಗೆ ನೀಡುತ್ತಾರೆ ಎಂದರು.

ಈ ಸಂದರ್ಭದಲ್ಲಿ ಶಾಲೆಯ ಅಧ್ಯಕ್ಷ ಡಾ. ರವೀಂದ್ರ ಬೆಳ್ಳಿ, ಮುಖ್ಯ ಗುರುಮಾತೆ ಚೈತ್ರಾ ಗುಳೇದಗುಡ್ಡ, ಶಿಕ್ಷಕಿಯರಾದ ಕೀರ್ತಿ ಚಿಮ್ಮಲಗಿ, ವಿದ್ಯಾ ನರಸರಡ್ಡಿ, ಜಗದೀಶ ಕಾಶಿನಕುಂಟೆ, ಕಾಶಿಬಾಯಿ ಪಾಟೀಲ ಸೇರಿದಂತೆ ಶಾಲಾ ಮಕ್ಕಳು, ಪಾಲಕರು ಉಪಸ್ಥಿತರಿದ್ದರು.

# ಕರಕುಶಲ ವಸ್ತುಗಳ ಪ್ರದರ್ಶನ




**ತಿಕೋಟಾ :** ಪಟ್ಟಣದ ಬಿ.ಎಲ್.ಡಿ ಇ ಸಂಸ್ಥೆಯ ನೂತನಕಲಾ ಮತ್ತುವಾಣಿಜ್ಯಮಹಾವಿದ್ಯಾಲಯದಲ್ಲಿ ಇಂದು ಮಂಗಳವಾರ 23 ಜೂ 2024 ರಂದು ವಿದ್ಯಾರ್ಥಿಗಳಿಂದ ತಯಾರಿಸಿದ ಕರಕುಶಲ ವಸ್ತುಗಳ ಪ್ರದರ್ಶನ ಜರುಗಿತು.

ವಿದ್ಯಾರ್ಥಿಗಳು ಹಾಳದ ವಸ್ತುಗಳಿಂದ ತಯಾರಿಸಿದ ವಸ್ತುಗಳು ನೋಡುಗರ ಮನಸೂರೆಗೊಳಿಸಿತು. ಕಾರ್ಯಕ್ರಮದಲ್ಲಿ ಎ.ಬಿ.ಜತ್ತಿ ಪಿಯು ಕಾಲೇಜಿನ ರಾಜ್ಯ ಶಾಸ್ತ್ರ ವಿಭಾಗದ ಉಪನ್ಯಾಸಕಿಯರಾದ ಶ್ರೀಮತಿ ಕೆ.ಎ ಹೊಸಟ್ಟಿ ಇವರು ನಿರ್ಣಾಯಕರಾಗಿ ಆಗಮಿಸಿ ಕರಕುಶಲ ವಸ್ತುಗಳನ್ನು ವಿಕ್ಷಣೆ ಮಾಡಿ ಅವುಗಳ ಕುರಿತು ಮಾತನಾಡಿದ ಅವರು ವ್ಯಕ್ತಿತ್ವ ವಿಕಸನಕ್ಕೆ ಇದೊಂದು ಮಾದರಿಯಾಗಿದೆ ವಿದ್ಯಾರ್ಥಿಗಳು ಹಾಳಾದ ವಸ್ತುಗಳನ್ನು ಸದ್ಬಳಕೆ ಮಾಡಿಕೊಂಡು ಒಳ್ಳೆಯ ಕಲಾಕೌಶಲ್ಯಗಳನ್ನು ತಯಾರಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಶುಭ ಕೋರಿ ಮುಂದಿನ ದಿನಮಾನಗಳಲ್ಲಿ ಇವು ನಿಮ್ಮ ಕೈ ಹಿಡಿಯುತ್ತವೆ. ಅವುಗಳ ಬಗ್ಗೆ ಹೆಚ್ಚಿನ ಗಮನಹರಿಸಿರಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಪ್ರೊ ಆರ್.ಬಿ ಸಿರಸಂಗಿ ಮಾತನಾಡಿ ಕಸದಿಂದ ರಸ ತೆಗೆಯುವ ಕಲೆ ಕರಗತ ಮಾಡಿಕೊಳ್ಳಿರಿ ಕೌದಿ ಹೊಲೆಯುವ ಒಬ್ಬಳು ಮಹಿಳೆ ಇಂದು ಪ್ರತಿದಿನ ಲಕ್ಷಗಟ್ಟಲೆ ಸಂಪಾದನೆ ಮಾಡುತ್ತಿದ್ದಾಳೆ ವಿದ್ಯಾರ್ಥಿಗಳೇ ಇಂಥ ಕರಕುಶಲ ವಸ್ತುಗಳ ತಯಾರಿಕೆಯಿಂದ ನಿಮ್ಮ ಬೌದ್ಧಿಕ ಮಟ್ಟ ಹೆಚ್ಚಿಸುತ್ತದೆ ಎಂದು ಹೇಳಿದರು.

ಡಾ.ಎಂ.ಬಿ.ಹೂಗಾರ ಡಾ.ಸೂರ್ಯಕಾಂತ ವಾಗಮಾರೆ ಡಾ.ರವಿಚಂದ್ರ ವಾಲಿಕಾರ ಡಾ. ಕೃಷ್ಣಮೂರ್ತಿ ಸಿ.ಎನ್ ದೈಹಿಕ ನಿರ್ದೇಶಕರಾದ ಶಿವಮೂರ್ತಿ ಚಿಕ್ಕನರ್ತಿ ಆಯ್ ಕ್ಯೂ ಎಸಿ ಸಂಯೋಜಕರಾದ ಆರ್. ಎಫ್. ನಾಗಣ್ಣವರ ನಾಗರಾಜ ನರಳೆ ಎ.ಎಂ ಪಟೀಲ ಶ್ರೀಮತಿ ಎಲ್.ಬಿ ದೇಸಾಯಿ ಸ್ವಪ್ನಾ ಹಾಲಳ್ಳಿ ಸುರೇಶ ಉಪ್ಪಾರ ಅಸ್ಲಂ ಮುಲ್ಲಾ ಸುಶಾಂತ ಜವ್ವಾರ ಡಾ.ಬಸವರಾಜ ಸಾಲವಾಡಗಿ ಸೇರಿದಂತೆ ಮಹಾವಿದ್ಯಾಲಯದ ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತರಿದರು. ಕಾರ್ಯಕ್ರಮ ಶ್ರೀ ಜಿ.ಎಂ ಕಾಂಬಳೆ ಸ್ವಾಗತಿಸಿ ನಿರೂಪಿಸಿದರು ಶ್ರೀ ಸಂತೋಷ ಹೆಗಡೆ ವಂದಿಸಿದರು.

# ದೇಶದ ಅಭಿವೃದ್ಧಿಗೆ ಪೂರಕ ಬಜೆಟ್: ಸಂಸದ ಗದ್ದಿಗೌಡರ

**ಬಾಗಲಕೋಟೆ:**ಕೇಂದ್ರಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ದೇಶದ ಅಭಿವೃದ್ಧಿಗೆ ಪೂರಕ ಹಾಗೂ ಜನಪರ ಬಜೆಟ್ ಆಗಿದೆ ಎಂದು ಸಂಸದ ಪಿ.ಸಿ.ಗದ್ದಿಗೌಡರ ತಿಳಿಸಿದ್ದಾರೆ.

ಕೇಂದ್ರ ಬಜೆಟ್‌ದಲ್ಲಿ ರಕ್ಷಣಾ ಕ್ಷೇತ್ರಕ್ಕೆ 6.2ಲಕ್ಷ ಕೋಟಿ ರೂ. ಗಳನ್ನು ನೀಡಲಾಗಿದೆ. ಕೃಷಿ ಕ್ಷೇತ್ರಕ್ಕೆ 1.5 ಲಕ್ಷ ಕೋಟಿ ರೂ.ಘೋಷಣೆ

ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ವರ್ಷದಲ್ಲಿ 1ಕೋಟಿ ರೈತರು ನೈಸರ್ಗಿಕ ಕೃಷಿ ವ್ಯಾಪ್ತಿಗೆ, ಶಿಕ್ಷಣ, ಕೌಶಲ್ಯ, ಉದ್ಯೋಗ ಅಭಿವೃದ್ಧಿಗಾಗಿ 1.48 ಲಕ್ಷ ಕೋಟಿ ಮೀಸಲು, ಮೊದಲಬಾರಿ ಉದ್ಯೋಗ ಮಾಡುವವರಿಗೆ ಒಂದು ತಿಂಗಳು ಸರ್ಕಾರದಿಂದಲೇ ಸಂಬಳ

ಉನ್ನತ ಶಿಕ್ಷಣಕ್ಕೆ ಸರ್ಕಾರದಿಂದ 10 ಲಕ್ಷದವರೆಗೆ ಸಾಲ ಸೌಲಭ್ಯ

5 ವರ್ಷಗಳಲ್ಲಿ 4.1 ಕೋಟಿ ಯುವಜನತೆಗೆ ಉದ್ಯೋಗ ಯೋಜನೆ

5 ವರ್ಷಗಳಲ್ಲಿ ಟಾಪ್-500 ಕಂಪನಿಗಳಲ್ಲಿ ಒಂದು ಕೋಟಿ ಯುವಜನತೆಗೆ ಇಂಟರ್ನ್ ಶಿಪ್



ಅವಕಾಶ,

ಪಿಎಂ ಆವಾಸ್ ಯೋಜನೆಯಡಿ 3 ಕೋಟಿ ಮನೆಗಳ ನಿರ್ಮಾಣ ಮಾಡಲು ಘೋಷಣೆ ಮಾಡಿದ್ದುಇದೊಂದು ಜನಪರ ಬಜೆಟ್‌ಆಗಿದೆಎಂದುಹೇಳಿದ್ದಾರೆ.

ಧಾರ್ಮಿಕ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು ಗಯಾದ ವಿಷ್ಣುಪಾದ ದೇವಾಲಯ, ಮಹಾಬೋಧಿದೇವಾಲಯಗಳಿಗೆ ಕಾರಿಡಾರ್ ನಿರ್ಮಾಣ ನಳಂದ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನ

ತೆರಿಗೆ ಸ್ಲ್ಯಾಬ್ ನಲ್ಲಿ ಕೆಲ ಬದಲಾವಣೆ ಘೋಷಣೆ

ಮೊಬೈಲ್,ಚಾರ್ಜರ್ ತೆರಿಗೆಕಡಿತ ಚಿನ್ನ, ಬೆಳ್ಳಿ ಮೇಲೆ ಕಸ್ಟಮ್ಸ್ ತೆರಿಗೆ ಶೇ.6ರಷ್ಟು ಕಡಿತ,ಸ್ಟ್ಯಾಂಡರ್ಡ್ ಡಿಡಕ್ಷನ್ 75 ಸಾವಿರಕ್ಕೆ ಹೆಚ್ಚಳ

ಮೂರು ಕ್ಯಾನ್ಸರ್ ಔಷಧಗಳ ದರ ಇಳಿಕೆ

ಸೂರ್ಯ ಘರ್ ಉಚಿತ ವಿದ್ಯುತ್ ಯೋಜನೆ ಘೋಷಣೆ- ಮನೆ ಮೇಲ್ಛಾವಣಿಗಳ ಮೇಲೆ ಸೌರ ಫಲಕ ಅಳವಡಿಕೆಗೆ ಅನುದಾನ ನೀಡುವ ಮೂಲಕ ಇದೊಂದು ದೇಶದ ಅಭಿವೃದ್ಧಿಯನ್ನು ಗವುನದದಲ್ಲಿಟ್ಟುಕೊಂಡು ಮಂಡಿಸಿರುವ ಬಜೆಟ್ ಆಗಿದೆ ಎಂದು ಹೇಳಿದ್ದಾರೆ.

# ಇದು ಆಂಧ್ರ ಪ್ರದೇಶ ಮತ್ತು ಬಿಹಾರ ರಾಜ್ಯಗಳ ಬಜೆಟ್



ಇದು ದೇಶದ ಬಜೆಟ್ ಅಲ್ಲ, ಆಂಧ್ರ ಪ್ರದೇಶ ಮತ್ತು ಬಿಹಾರ ರಾಜ್ಯಗಳ ಬಜೆಟ್ ಆಗಿದೆ. 7 ಲಕ್ಷದವರೆಗೆ ಇದ್ದ ತೆರಿಗೆ ವಿನಾಯ್ತಿಯನ್ನು 3 ರಿಂದ 7ಲಕ್ಷವರೆಗೆ 5% ವಿಧಿಸಿ ಮಧ್ಯಮವರ್ಗದವರಿಗೆ ಹೊಡೆತ ನೀಡಿದೆ. ಬಂಗಾರ ಕೊಳ್ಳುವ ಶ್ರೀಮಂತರಿಗೆ ಅನುಕೂಲ, ಮಧ್ಯಮ ವರ್ಗದ ಹೂಡಿಕೆದಾರರ ಮೇಲೆ ಗದಾಪ್ರಹಾರ ಮಾಡಿದೆ. ಮುದ್ರಾ ಯೋಜನೆ ಸ್ವಾಗತ, ಔಷಧಗಳ ಮೇಲಿನ ದುಬಾರಿ ತೆರಿಗೆ ಇಳಿಸಿಲ್ಲ. ಕುಟುಂತ್ತಾ ಸಾಗಿದ ರಾಜ್ಯದ ರೈಲು ಯೋಜನೆಗೆ ಯಾವುದೇ ಸಹಾಯವಿಲ್ಲ.

– ಶ್ರೀಪಾದ ಗುಂಡಾ

**ಔಷಧ ವ್ಯಾಪಾರಸ್ಥರು. ಮಹಾಲಿಂಗಪುರ**

# ಮಣ್ಣಿನ ಕಣಗಳನ್ನು ನಿಮ್ಮ ರಕ್ತ ಕಣಗಳಂತೆ ಸಂರಕ್ಷಿಸಿ: ಕುಲಪತಿ ಡಾ. ಪಿ.ಎಲ್. ಪಾಟೀಲ

**ವಿಜಯಪುರ :** ಜಿಲ್ಲೆಯ ಇಂಡಿ ತಾಲೂಕಿನ ಸಾಲೋಟಗಿಗ್ರಾಮದಲ್ಲಿಇಚಿಡಿಕೃಷಿವಿಜ್ಞಾನ ಕೇಂದ್ರ ಹಾಗೂ ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ಸಹಯೋಗದಲ್ಲಿ "ಕೃಷಿ ವಿಜ್ಞಾನಿಗಳ ನಡೆ ರೈತರ ಕಡೆಗೆ" ಎಂಬ ವಿನೂತನ ಕಾರ್ಯಕ್ರಮದಡಿಯಲ್ಲಿ 'ಲಿಂಬೆ ಮತ್ತು ಕಬ್ಬು ಬೆಳೆಗಳ ವಿಚಾರ ಸಂಕೀರ್ಣ' ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮವನ್ನು ಧಾರವಾಡ ಕೃಷಿ ವಿವಿ, ಕುಲಪತಿ ಡಾ. ಪಿ. ಎಲ್. ಪಾಟೀಲ ಉದ್ಘಾಟಿಸಿ ಮಾತನಾಡಿ, ಮಣ್ಣು ಅಮೂಲ್ಯವಾದ ಸಜೀವ ವಸ್ತು. ಮಣ್ಣು ಮತ್ತು ನೀರನ್ನು ಸಂರಕ್ಷಿಸಬೇಕಾದುದು ರೈತರ ಆದ್ಯ ಕರ್ತವ್ಯವಾಗಿದೆ ಎಂದರು. ಈ ಭಾಗದಲ್ಲಿ ರೈತರು ಕೃಷಿ ಬೆಳೆಗಳ ಜೊತೆಗೆ ತೋಟಗಾರಿಕೆ ಬೆಳೆ ಅದರಲ್ಲೂ ಲಿಂಬೆ ಬೆಳೆಯನ್ನು ವಿಶೇಷವಾಗಿ ಬೆಳೆಯುತ್ತಿದ್ದಾರೆ. ಲಿಂಬೆ ಬೆಳೆಯ ಸಂಶೋಧನೆ ಮತ್ತು ಅಭಿವೃದ್ಧಿಗೋಸ್ಕರ ಇಂಡಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮೂರು ಕೋಟಿ ವೆಚ್ಚದ ಕಟ್ಟಡ ಮತ್ತು ಇನ್ನಿತರ ಸಾಮಗ್ರಿಗಳನ್ನು ವ್ಯವಸ್ಥೆಮಾಡಲಾಗುತ್ತಿದೆ. ಇದರಿಂದಾಗಿ ಲಿಂಬೆಗೆ ಹೆಚ್ಚಿನ ಸ್ಥಾನಮಾನ ಬರಲು ಗುಣಮಟ್ಟದ ಲಿಂಬೆ ಉತ್ಪಾದನೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕುರಿತು ತರಬೇತಿ



ನೀಡಲಾಗುವುದು ಎಂದರು.

ರೈತರ ಮಕ್ಕಳಿಗೆ ಕೃಷಿ ಪದವಿ ವ್ಯಾಸಂಗ ಮಾಡಲು ವಿಫುಲ ಅವಕಾಶಗಳಿವೆ. ತಮ್ಮ ಕುಟುಂಬದಲ್ಲಿರುವ ಒಬ್ಬರನ್ನು ಕೃಷಿ ಪದವೀಧರರನ್ನಾಗಿ ಮಾಡಿ ಅವರಿಂದ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಕೃಷಿಯಲ್ಲಿ ಆದಾಯವನ್ನುದ್ವಿಗುಣಗೊಳಿಸಿಕೊಳ್ಳಬೇಕು. ರೈತರಿಗೆ ಕೃಷಿ ವಿಜ್ಞಾನ ಕೇಂದ್ರದಿಂದ ಕಾಲ ಕಾಲಕ್ಕೆ ತರಬೇತಿ, ಕ್ಷೇತ್ರ ಭೇಟಿ ಮೂಲಕ ರೈತರಸಮಸ್ಯೆಗಳನ್ನುಪರಿಹರಿಸಿಕೊಳ್ಳಬೇಕು ಎಂದರು.

ವಿಸ್ತರಣಾ ನಿರ್ದೇಶಕ ಡಾ. ಎಸ್. ಎಸ್. ಅಂಗಡಿ ಮಾತನಾಡಿ, ರೈತರು ವಿಜ್ಞಾನಿಗಳಂತೆ ವಿಚಾರ ಮಾಡಬೇಕು. ವ್ಯಾಪಾರಿಯಂತೆ ವ್ಯವಹಾರ ಮಾಡಿ ಲಾಭ ಗಳಿಸಬೇಕೆಂದರು. ರೈತರು ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳುವುದರಿಂದ ಒಂದರಲ್ಲಿ ನಷ್ಟವಾದರೂ ಇನ್ನೊಂದರಲ್ಲಿ ಲಾಭ ಪಡೆಯಬಹುದಾಗಿದೆ ಎಂದು ಹೇಳಿದರು.

ಸಂಶೋಧನಾ ನಿರ್ದೇಶಕ ಡಾ. ಬಿ. ಡಿ. ಬಿರಾದಾರ ಮಾತನಾಡಿ, ಕೃಷಿಯಲ್ಲಿ ಅನೇಕ ಅನ್ವೇಷಣೆಗಳು ಆಗುತ್ತಿದ್ದು, ಅವುಗಳನ್ನು ರೈತರು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕು. ಆಯಾ ಭಾಗಕ್ಕೆ ಸೂಕ್ತವಾದ ತಳಿ ಆಯ್ಕೆ ಮಾಡಿಕೊಳ್ಳಬೇಕು. ತಜ್ಞರ ಸಲಹೆ ಪಡೆದು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕೆಂದರು.

ಇದೇ ಸಂದರ್ಭದಲ್ಲಿ ಕೃಷಿಯಲ್ಲಿ ಆದಾಯ ದ್ವಿಗುಣಗೊಳಿಸಿದ 80 ರೈತರಿಗೆ ಸನ್ಮಾನಿಸಿ ಪ್ರಮಾಣ ಪತ್ರ ವಿತರಿಸಲಾಯಿತು. ಮಹಿಳೆಯರಿಗೆ ಕೈತೋಟ ಮಾಡಲು ತರಕಾರಿ ಕಿಟ್ ವಿತರಿಸಲಾಯಿತು. ನಂತರ ಲಿಂಬೆ ಮತ್ತು ಕಬ್ಬು ಬೆಳೆಯ ಕುರಿತು ವಿಚಾರ ಸಂಕಿರಣ ಮತ್ತು ರೈತರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಸೋಮಯ್ಯ ಎಸ್. ಚಿಕ್ಕಪಟ್ಟ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಶಿವಯೋಗಪ್ಪ ನೇದಲಗಿ, ಬೀರಪ್ಪ ಕಲ್ಯಾಣಿ, ಸುಶ್ಮಿತಾ ಕುಂಬಾರ, ಸಹ ವಿಸ್ತರಣಾ ನಿರ್ದೇಶಕ ಡಾ. ಆರ್. ಬಿ. ಬೆಳ್ಳಿ, ಡಾ. ಶಿವಶಂಕರಮೂರ್ತಿ, ಡಾ. ಎಸ್. ಎಮ್. ವಸ್ತ್ರದ, ಡಾ. ಸಂಜಯ ಪಾಟೀಲ, ಡಾ. ಹೀನಾ ಎಮ್. ಎಸ್., ಡಾ. ಬಾಲಾಜಿ ನಾಯಕ,

ಡಾ. ಪ್ರಸಾದ ಎಮ್. ಜಿ., ಪ್ರೇಮಚಂದ ಯು., ಇಲಾಖೆಯ ಅಧಿಕಾರಿಗಳಾದ ರಾಹುಲ್ ಭಾವಿದೊಡ್ಡಿ, ಚಂದ್ರಕಾಂತ ಪವಾರ, ಆನಂದ, ಡಾ. ಪ್ರಕಾಶ ಜಿ., ಪ್ರಗತಿಪರ ರೈತರಾದ ಎಸ್. ಟಿ. ಪಾಟೀಲ, ರಾಜಶೇಖರ ನಿಂಬರಗಿ, ಶಿವರಾಜ ಪಾರಗೊಂಡ, ಶಿವಾನಂದ ಕುಂಬಾರ ಸೇರಿದಂತೆ ಸಾಲೋಟಗಿ ಹಾಗೂ ಸುತ್ತಲಿನ ಗ್ರಾಮಗಳ ರೈತರು ಭಾಗವಹಿಸಿದ್ದರು.

# ಶಾಂತಿನಿಕೇತನ ಶಾಲೆಯಲ್ಲಿ ಗುರು ಪೂರ್ಣಿಮೆ



**ವಿಜಯಪುರ :** ಶಾಂತಿನಿಕೇತನ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಗುರುಪೂರ್ಣಿಮಾ ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮಕ್ಕೆ ಸಂಸ್ಥೆಯ ಚೇರಮನ್ ಡಾ. ಸುರೇಶ ಬಿರಾದಾರ ಅವರು ವ್ಯಾಸ ಮಹರ್ಷಿಗಳ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ, ಮಾತನಾಡುತ್ತ ಭಾರತಿಯ ಸಂಸ್ಕೃತಿಯಲ್ಲಿ ಗುರುವಿಗೆ ಶ್ರೇಷ್ಠವಾದ ಸ್ಥಾನವಿದೆ. ಪುರಾಣ, ಪುಣ್ಯಕಥೆಗಳಲ್ಲಿ ಗುರುವಿಗೆ ಸಿಕ್ಕ ಸ್ಥಾನ ಎಂತಹದ್ದು ಎಂದು ತಿಳಿಯಬಹುದು. ರಾಮಾಯಣದಲ್ಲಿ ರಾಮ ಮರ್ಯಾದ ಪುರುಷೋತ್ತಮ ಎಂದು ಅನಿಸಿಕೊಳ್ಳಲು ಅವನಿಗೆ ಸಿಕ್ಕ ವಶಿಷ್ಠ ಗುರುವೆ ಕಾರಣ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕ ಶರತ್ ಬಿರಾದಾರ ಅವರು ಮಾತನಾಡಿ, ವಿದ್ಯಾರ್ಥಿಗಳು ಗುರಿಯನ್ನು ಸಾಧಿಸಬೇಕೆಂದರೆ ಗುರುವಿನ ಮಾರ್ಗದರ್ಶನ ಬೇಕೇ ಬೇಕು. ಗುರು ಆದವನು ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗವನ್ನು ತೋರಿಸಿ ಸಮಾಜದ ಸತ್ ಪ್ರಜೆಯನ್ನಾಗಿ ಮಾಡುವ ಶಕ್ತಿಯನ್ನು ಹೊಂದಿದ್ದಾನೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕಿ ದಿವ್ಯಾ ಬಿರಾದಾರ ಅವರು ಎಲ್ಲ ವಿದ್ಯಾರ್ಥಿಗಳಿಗೆ ಗುರುಪೂರ್ಣಿಮೆಯ ಶುಭಾಶಯವನ್ನು ಕೋರಿದರು. ಪ್ರಾಚಾರ್ಯ ಶೀಧರ ಕುರಬೇಟ್, ಶಿಕ್ಷಕರಾದ ಪ್ರವೀಣಕುಮಾರ ಗೆಣ್ಣೂರ, ಎ.ಎಚ್. ಸಗರ್,ಶಶಿಧರ್,ಅಶ್ವಿನ್,ಅನಿಲ್,ಕಿರಣ್,ಸರೋಜಾ, ಸೀಮಾ, ಶ್ರೀದೇವಿ, ದೀಪಾ, ಅಪ್ಸರಾ, ತಬಸುಮ್, ಹೀನಾ, ಸುರೇಖ, ತೇಜಸ್ವಿನಿ ಮುಂತಾದವರು ಉಪಸ್ಥಿತರಿದ್ದರು.

# ತಂತ್ರಜ್ಞಾನ ಬೆಳವಣಿಗೆಯಿಂದ ವಿಶ್ವದಲ್ಲಿ ಭಾರತ ಮುಂಚೂಣಿ ರಾಷ್ಟ್ರವಾಗಲಿದೆ

**ಬೆಳಗಾವಿ :** ಭಾರತದಲ್ಲಿ ಆರ್ಥಿಕ ಅಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪ್ರಗತಿ, ಕೈಗಾರಿಕೀಕರಣ, ಕೃಷಿ ಕ್ಷೇತ್ರದ ಸುಧಾರಣೆಗಳು,ಶಿಕ್ಷಣಮತ್ತುಆಧುನೀಕರಣ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ. ಪ್ರಸ್ತುತ ನಮ್ಮ ದೇಶವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವತ್ತ ವೇಗದಲ್ಲಿ ಸಾಗುತ್ತಿದೆ, ಮುಂಬರುವ ವರ್ಷಗಳಲ್ಲಿ ದೇಶವನ್ನು ವಿಶ್ವದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಮುಂಚೂಣಿಗೆ ತರಲು ನಾವು ಸಕ್ರಿಯ ಪ್ರಯತ್ನಗಳನ್ನು ಮಾಡಬೇಕಾಗಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಕರೆ ನೀಡಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಜ್ಞಾನಸಂಗಮ ಆವರಣದ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ನಡೆದ ವಿಟಿಯು 24ನೇ ಘಟಿಕೋತ್ಸವ ಭಾಗ -1 ರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತೀಯ ಆರ್ಥಿಕತೆಯ ಅಭಿವೃದ್ಧಿಯಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಪ್ರಮುಖ ಕೊಡುಗೆಯನ್ನು ಹೊಂದಿವೆ. ಪ್ರಸ್ತುತ ನಮ್ಮ ಆರ್ಥಿಕತೆಯು ವಿಶ್ವದ 5 ನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಅದನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಸಕ್ರಿಯ ಪ್ರಯತ್ನಗಳು ನಡೆಯಬೇಕು




ಎಂದು ಹೇಳಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕೊಡುಗೆ:

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅದ್ಭುತ ಸಾಧನೆಗಳನ್ನು ಸಾಧಿಸುವ ಮೂಲಕ ಭಾರತವು ಬಾಹ್ಯಾಕಾಶ ಸಂಶೋಧನೆ, ಚಂದ್ರಯಾನ ಮಿಷನ್, ಮಂಗಳಯಾನ ಮತ್ತು ಇಂಟರ್ನೆಟ್ ತಂತ್ರಜ್ಞಾನ ಕ್ಷೇತ್ರದಲ್ಲೂ ಹೊಸ ಗುರುತನ್ನು ಮಾಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಪ್ರಗತಿಯಿಂದಾಗಿ ಸ್ವಾವಲಂಬಿ ಭಾರತವು ಪ್ರಪಂಚದಾದ್ಯಂತ ತನ್ನ ಖ್ಯಾತಿಯನ್ನು ಹೆಚ್ಚಿಸಿದೆ. ಒನ್ ಇಂಡಿ-ಯಾ, ಅತ್ಯುತ್ತಮ ಭಾರತ ಮತ್ತು ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಮೇಡ್ ಇನ್ ಇಂಡಿಯಾ ಮತ್ತು ಮೇಕ್ ಇನ್ ಇಂಡಿಯಾ ಗುರಿಯನ್ನು ಸಾಧಿಸುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆ ಮುಖ್ಯವಾಗಿದೆ ಎಂದುಅವರುತಿಳಿಸಿದರು.ದೇಶದಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ನುರಿತ ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ಮೂಲಕ ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಗತಿ ಸಾಧಿಸುವ ಹಾಗೂ ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವಲ್ಲಿ ತಾಂತ್ರಿಕ ಶಿಕ್ಷಣವು ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ತಂತ್ರಜ್ಞಾನವು ನಾವು ಊಹಿಸುವುದಕ್ಕಿಂತ ವೇಗವಾಗಿ ಬದಲಾಗುತ್ತಿದೆ. ಆದ್ದರಿಂದ ನಮ್ಮ ಸಂಶೋಧಕರು, ವಿಜ್ಞಾನಿಗಳು ಮತ್ತು ತಜ್ಞರು ಪ್ರತಿಯೊಂದು ಕ್ಷೇತ್ರವನ್ನು ಮುನ್ನೆಚ್ಚರಿಕೆ ವಹಿಸಬೇಕು. ಉತ್ಪಾದನೆ ಮತ್ತು ಉದ್ಯಮಶೀಲತೆಯ ಯುಗವಾಗಿದೆ ಮತ್ತು ನಮ್ಮ ಯುವಕರು ಕಾರ್ಯಕ್ಷಮತೆ ಮತ್ತು ಸುಧಾರಣೆಯ ಚಾಲಕರಾಗಲು ಸಾಮರ್ಥ್ಯ ಮತ್ತು ನಿರ್ಣಯವನ್ನು ಹೊಂದಿದ್ದಾರೆ. ಸ್ವಾಮಿ ವಿವೇಕಾನಂದರು ಹೇಳಿದಂತೆ? "ಎದ್ದೇಳಿ, ಎಚ್ಚರಗೊಳ್ಳಿರಿ ಮತ್ತು ಗುರಿಯನ್ನು ಸಾಧಿಸುವವರೆಗೆ ನಿಲ್ಲಬೇಡಿ", ಈ ಸಂಕಲ್ಪದೊಂದಿಗೆ ನಮ್ಮ ಯುವಕರು ದೇಶದ ಅಭಿವೃದ್ಧಿಯಲ್ಲಿ ತಮ್ಮ ಪ್ರಮುಖ ಪಾತ್ರವನ್ನು ವಹಿಸುತ್ತಾರೆ ಎಂದು ಭರವಸೆ ವ್ಯಕ್ತಪಡಿಸಿದರು.

# ಮಾದಕ ದ್ರವ್ಯಗಳ ಸೇವನೆ ತಡೆಗಟ್ಟಲು ಕೈಜೋಡಿಸಿ:ಶಿಕ್ಷಕ ಜಗದೀಶ ಸಾಲಳ್ಳಿ

**ಕೊಲ್ಹಾರ:** ಧೂಮಪಾನ, ಮದ್ಯಪಾನ ಸೇರಿದಂತೆ ಇನ್ನಿತರ ಮಾದಕ ದ್ರವ್ಯಗಳ ಸೇವನೆ ಚಟದಿಂದ ದೂರಸರಿದು ಆರೋಗ್ಯಕರ ಜೀವನ ನಡೆಸಬೇಕು ಎಂದು ಸಹಶಿಕ್ಷಕ ಜಗದೀಶ್ವರ ಸಾಲಳ್ಳಿ ಹೇಳಿದರು.

ಮಸೂತಿ ಗ್ರಾಮದ ಶ್ರೀ ಗುರು ಸಂಗನಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಸಂಭ್ರಮ ಶನಿವಾರದ ಮಾದಕ ವಸ್ತುಗಳ ದುರ್ಬಳಕೆ ತಡೆಗಟ್ಟುವಿಕೆ ವಿಷಯದನ್ವಯ ಮಕ್ಕಳಿಗೆ ಕಿರುನಾಟಕ,ಗುಂಪು ಚಟುವಟಿಕೆ ಮಾರ್ಗದರ್ಶನ ನೀಡಿ ಮಾತನಾಡಿದರು.



ಮದ್ಯ ಸೇವನೆಯಿಂದ ವ್ಯಕ್ತಿಯ ಆರೋಗ್ಯದ ಜೊತೆಗೆ ಕುಟುಂಬದ ಆರ್ಥಿಕ ಪರಿಸ್ಥಿತಿ ಮೇಲೆ ಅಗಾಧವಾದ ಪರಿಣಾಮ ಬೀರಿ, ಕುಟುಂಬಗಳು ಸಂಕಷ್ಟ ಅನುಭವಿಸಬೇಕಾಗುತ್ತದೆ ಇದನ್ನು ತಡೆಗಟ್ಟಲು ಸಮಾಜದಲ್ಲಿ ಮಕ್ಕಳು, ಯುವಕರು ಸೇರಿದಂತೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ಮಾದಕ ದ್ರವ್ಯ ದುಷ್ಪರಿಣಾಮ ತಡೆಗಟ್ಟುವಿಕೆ ಕುರಿತು ಬಿತ್ತಿ ಪತ್ರ ಪ್ರದರ್ಶಿಸಿ,ಕಿರು ನಾಟಕಗಳ ಮೂಲಕ ದುಷ್ಪರಿಣಾಮ ಮನವರಿಕೆ ಮಾಡಿದರು.

ಶಿಕ್ಷಕ ಜಗದೀಶ ಸಾಲಳ್ಳಿ ಪ್ರತಿಜ್ಞೆ ಬೋಧಿಸಿ ಮಾದಕ ದ್ರವ್ಯ ಸೇವನೆ ಮಾಡುವುದಿಲ್ಲಾ,ಮಾದಕ ದ್ರವ್ಯ ಸೇವನೆ ಮಾಡುವವರನ್ನು ತಡೆಗಟ್ಟಿ ಚಟದಿಂದ ಹೊರಬರಲು ಸಹಾಯ ಮಾಡುತ್ತೇವೆ ಎಂದು ಮಕ್ಕಳಿಗೆ ಪ್ರತಿಜ್ಞೆ ಮಾಡಿಸಿದರು. ಈ ಸಂದರ್ಭದಲ್ಲಿ ಮುಖ್ಯ ಗುರುಗಳಾದ ಸಿ.ಎ. ಗೂಗಿಹಾಳ ಸಹಶಿಕ್ಷಕರಾದ ಎಸ ಎಸ್ ಗಂಗಲ್, ಪ್ರವೀಣ ಪಾಟೀಲ, ಎಚ್ ಎಸ್ ತಳವಾರ ಉಪಸ್ಥಿತರಿದ್ದರು.

